ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

29 ಏಪ್ರಿಲ್ 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 50 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಮುಲ್ಲನಪುರದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅರ್ಧ ಶತಕ (59 ರನ್)ಗಳಿಸಿದ ಪಂಜಾಬ್ ಕಿಂಗ್ಸ್ ತಂಡದ ಪ್ರಭಸಿಮ್ರನ್ ಸಿಂಗ್... ಆರ್‌ಆರ್‌ಗೆ 223 ರನ್ ಗುರಿ...

ಪರೀಕ್ಷೆ ನಡೆಸೋದು ಬರೀ ಪಾಸ್ ಮಾಡೋಕಲ್ಲ ! » 2

ವಿನಯ್ ಕುಲಕರ್ಣಿ ಅರ್ಜಿ : ಸಿಬಿಐಗೆ ಕೋರ್ಟ್ ನೋಟೀಸ್ » 3

ಧಾರ್ಮಿಕ ಸಂಸ್ಥೆಗಳಲ್ಲಿ ಅರಾಜಕತೆ ಸೃಷ್ಟಿಗೆ ಅವಕಾಶವಿಲ್ಲ » 4

ಕಾಡಾನೆ ದಾಳಿ ತಡೆಗೆ ಸ್ಥಳೀಯ ಟಾಸ್ಕ್‌ಫೋರ್ಸ್ ರಚಿಸಿ

ಆನೆ ಟ್ರ್ಯಾಕಿಂಗ್-ಮಾನಿಟರಿಂಗ್ ಪರಿಶೀಲನೆ | ಜಿಲ್ಲಾಡಳಿತ, ಅರಣ್ಯ ಇಲಾಖೆಗೆ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಸೂಚನೆ

• ಪ್ರಜೋದಯ ವರದಿ

ಹಾಸನ: ಕಾಡಾನೆ ಹಾವಳಿ ಪೀಡಿತ ಪ್ರದೇಶದಲ್ಲಿ ಜನರಿಗೆ ತುರ್ತು ಸಂದೇಶ ನೀಡುವ ಮೂಲಕ ಪ್ರಾಣ ಹಾನಿ ಸಂಭವಿಸುವುದನ್ನು ತಡೆಯಲು ಸ್ಥಳೀಯವಾಗಿ ಗ್ರಾಮ ಸಹಾಯಕರು, ಬೀಟ್ ಪೊಲೀಸ್, ಆಶಾ-ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಪಂಚಾಯಿತಿ ಸಿಬ್ಬಂದಿ ಒಳಗೊಂಡ ಟಾಸ್ಕ್‌ಫೋರ್ಸ್ ರಚಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಸೂಚನೆ ನೀಡಿದರು.

ನಗರದ ಅರಣ್ಯ ಭವನದಲ್ಲಿ ಮಂಗಳವಾರ ಆನೆ ಟ್ರ್ಯಾಕಿಂಗ್-ಮಾನಿಟರಿಂಗ್ ವ್ಯವಸ್ಥೆ ಪರಿಶೀಲನೆ ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ, ಕಂದಾಯ ಇಲಾಖೆ ಸಿಬ್ಬಂದಿ, ಆಶಾ-ಅಂಗನವಾಡಿ ಕಾರ್ಯಕರ್ತರು ಗ್ರಾಮದಲ್ಲೇ ಇರುವುದರಿಂದ ಜನರಿಗೆ ಕಾಡಾನೆಗಳ ಚಲನ-ವಲನದ ಬಗ್ಗೆ ತಕ್ಷಣ ಮಾಹಿತಿ ನೀಡಲು ನೆರವಾಗುತ್ತಾರೆ. ಪ್ರಸ್ತುತ ಇರುವ ಮೊಬೈಲ್ ಸಂದೇಶ ರವಾನಿಸುವ ಕೆಲಸ ಮುಂದುವರೆಸುವ ಜೊತೆಗೆ ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವಂತಾಗಬೇಕೆಂದು ನಿರ್ದೇಶನ ನೀಡಿದರು.

ಜಿಲ್ಲಾಡಳಿತ ಮತ್ತು ಅರಣ್ಯ ಇಲಾಖೆ ತಾವೇ ಒಂದು ಮಾರ್ಗಸೂಚಿ ತಯಾರಿಸಿ ಟಾಸ್ಕ್ ಫೋರ್ಸ್ ರಚಿಸಿಕೊಳ್ಳಿ. ಎಲ್ಲಾ ಭಾಗದಲ್ಲೂ ಕಾಡಾನೆ ಹಾವಳಿ ಇಲ್ಲದಿರುವುದರಿಂದ ನಿರ್ದಿಷ್ಟ ಪ್ರದೇಶಗಳನ್ನು ಗುರುತಿಸಿ ಕ್ರಮ ಕೈಗೊಳ್ಳುವ ಕೆಲಸವಾಗಬೇಕು. ಇದರಿಂದ ಅರಣ್ಯ ಇಲಾಖೆಗೂ ನೆರವಾಗುತ್ತದೆ. ಸಿಬ್ಬಂದಿ ಕೊರತೆ ಸಮಸ್ಯೆಯೂ ನಿವಾರಣೆಯಾಗುತ್ತದೆ ಎಂದು ಸಲಹೆ ನೀಡಿದರು.

> ಕಾಡಾನೆ ಸಂಚಾರದ ಬಗ್ಗೆ ಮಾಹಿತಿ ಬಂದ ತಕ್ಷಣ ಆ ಭಾಗದಲ್ಲಿ ಜನರ ಸಂಚಾರವನ್ನು ಕಡ್ಡಾಯವಾಗಿ ನಿಯಂತ್ರಣ ಮಾಡಬೇಕು. ಜನರು ಬೇಜವಾಬ್ದಾರಿಯಿಂದ ಮಾಹಿತಿ ಇದ್ದರೂ ನಿಯಮ ಉಲ್ಲಂಘನೆ ಮಾಡಿದರೆ ಆಗುವ ಅನಾಹುತಕ್ಕೆ ಜನರೇ ಕಾರಣರಾಗುತ್ತಾರೆ. ಜನರ ಸಹಕಾರವೂ ಅಗತ್ಯ. ಈ ಬಗ್ಗೆ ಜಾಗೃತಿ ಮೂಡಿಸಿ.
>
> -ಕೃಷ್ಣಬೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ

ಕಾಡಾನೆ ಯಾವ ಪ್ರದೇಶದಲ್ಲಿ ಇದೆ ಎಂಬ ಮಾಹಿತಿಯನ್ನು ಸ್ಥಳೀಯ ಟಾಸ್ಕ್‌ಫೋರ್ಸ್‌ಗೆ ತಿಳಿಸಿದರೆ, ಅವರು ಜನರಿಗೆ ತಿಳಿಸುವ ಕೆಲಸ ಮಾಡಬೇಕು. ಜನರಿಗೆ ಅನಗತ್ಯವಾಗಿ ಭಯ ಹುಟ್ಟಿಸುವ ಬದಲು ನಿರ್ಧಿಷ್ಟವಾಗಿ ಮಾಹಿತಿ ನೀಡಬೇಕು. ಜಿಪಿಎಸ್, ಸ್ಯಾಟ್‌ಲೈಟ್, ಡ್ರೋಣ್, ಎಐ ಸೇರಿ ನಿಮಗೆ ಯಾವುದರಿಂದ ಸಾಧ್ಯವೂ ಅದರಿಂದ ಕಾಡಾನೆ ಎಲ್ಲಿದೆ ಎಂದು ನಿಖರವಾಗಿ ಗುರುತಿಸಿ, ಜನರಿಗೆ ಸ್ಪಷ್ಟ ಮಾಹಿತಿ ನೀಡಬೇಕೆಂದು ಸೂಚಿಸಿದರು.

ಕಾಮಗಾರಿಗಳಿಂದ ಕಾಡಾನೆ ಹಾವಳಿ

ಈ ವೇಳೆ ಡಿಸಿಎಫ್ ಸೌರಭ್ ಕುಮಾರ್ ಅವರು ಮಾತನಾಡಿ, ರಾಷ್ಟ್ರೀಯ ಹೆದ್ದಾರಿ ನಿರ್ಮಾಣ, ರೈಲ್ವೆ ಯೋಜನೆ, ಎತ್ತಿನಹೊಳೆ ಕಾಮಗಾರಿಗಳಿಂದ ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದೆ. ಇತ್ತೀಚೆಗೆ ಬೇಲೂರು ತಾಲ್ಲೂಕು ಭಾಗದಲ್ಲಿ ಕಾಡಾನೆಗಳ ಓಡಾಟ ಹೆಚ್ಚಿದೆ. ಕಾಡಾನೆಗಳ ಬಗ್ಗೆ ಹೆಚ್ಚಿನ ನಿಗಾವಹಿಸಿ ಜನರಿಗೆ ಮಾಹಿತಿ ನೀಡುವ ಕೆಲಸವಾಗುತ್ತಿದೆ. ನಿರಂತರವಾಗಿ ಕಾಡಾನೆಗಳ ಟ್ರ್ಯಾಕಿಂಗ್ ಮತ್ತು ಮಾನಿಟರಿಂಗ್ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು.

ಹಗಲು-ರಾತ್ರಿ ಕೆಲಸ ಮಾಡಿದ್ರೂ ಮಾಹಿತಿ ಏಕಿಲ್ಲ

ಆನೆಗಳ ಟ್ರ್ಯಾಕಿಂಗ್-ಮಾನಿಟರಿಂಗ್ ವ್ಯವಸ್ಥೆ ಹಗಲು-ರಾತ್ರಿ ಶೇ.100ರಷ್ಟು ನಡೆಯುತ್ತಿದ್ದರೂ ಆನೆಗಳು ಕಾಡಿನಿಂದ ನಾಡಿಗೆ ಬರುವ ಮುನ್ನವೇ ಮಾಹಿತಿ ಇರಬೇಕು ಅಲ್ಲವೇ, ಆದರೂ ಏಕೆ ಕಾಡಾನೆ-ಮಾನವ ಸಂಘರ್ಷ ನಡೆಯುತ್ತಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳನ್ನು ಸಚಿವರು ಪ್ರಶ್ನಿಸಿದರು.

ನೀವು ನಿರಂತರವಾಗಿ ಟ್ರ್ಯಾಕಿಂಗ್, ಮಾಡಿದರೆ ಜನರಿಗೆ ಸರಿಯಾದ ಮಾಹಿತಿ ನೀಡಬೇಕಲ್ಲವೇ ಎಂಬ ಪ್ರಶ್ನೆಗೆ ಸರಿಯಾದ ಉತ್ತರ ನೀಡದೆ ಅಧಿಕಾರಿಗಳು ಮೌನಕ್ಕೆ ಶರಣಾದರು.

ರೈಲ್ವೆ ಬ್ಯಾರಿಕೇಡ್ ನಿರ್ಮಾಣದಿಂದ ಕೊಡಗು ಜಿಲ್ಲೆಯಿಂದ ಕಾಡಾನೆಗಳು ಈ ಭಾಗಕ್ಕೆ ಬರುವುದನ್ನು ತಡೆಯಲಾಗಿದೆ. ಆದರೆ, ಬೇಲೂರು ತಾಲ್ಲೂಕು ಭಾಗಕ್ಕೆ ಚಿಕ್ಕಮಗಳೂರು ಹಾಗು ಮೂಡಿಗೆರೆ ಭಾಗ ದಿಂದ ಕಾಡಾನೆಗಳು ಬರುತ್ತಿವೆ. ಬೇಲೂರು ಭಾಗದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ಆರಂಭಿಸಿ, ಮೂಡಿಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಸೆರೆ ಹಿಡಿಯಲಾಗಿದೆ ಎಂದು ಸವಾಲುಗಳನ್ನು ಪಿಟಿಸಿ ಮೂಲಕ ವಿವರಿಸಿದರು.

ಜನರ ಬೇಡಿಕೆಗಳು

ಜನರು ಕಾಡಾನೆಗಳನ್ನು ಸಂಪೂರ್ಣವಾಗಿ ಸ್ಥಳಾಂತರಿಸಿ ಎಂದು ಒತ್ತಾಯಿಸುತ್ತಿದ್ದಾರೆ. ಸಕಲೇಶಪುರ ತಾಲ್ಲೂಕಿನ 8 ಗ್ರಾಮಗಳ ರೈತರು ತಮ್ಮ ಜಮೀನನ್ನು ಆನೆ ಧಾಮಕ್ಕೆ ಬಿಟ್ಟುಕೊಡಲು ಮುಂದಾಗಿದ್ದಾರೆ. ಆ ಪ್ರಸ್ತಾವನೆ, ಕೇಂದ್ರ ಸರ್ಕಾರಕ್ಕೆ ಕಳುವಹಿಸಿದ್ದು, ಇನ್ನೂ ಅನುಮತಿ ಸಿಕ್ಕಿಲ್ಲ. ಬೆಳೆ ರಕ್ಷಣೆಗಾಗಿ ಸೋಲರ್ ಬೇಲಿ ಅಳವಡಿಸಿಕೊಳ್ಳಲು ಶೇ.50ರಷ್ಟು ಸಬ್ಸಿಡಿ ನೀಡಲಾಗುತ್ತಿದೆ. ಜನರು ಶೇ.90 ಸಬ್ಸಿಡಿ ಬೇಕೆಂದು ಕೇಳುತ್ತಿದ್ದಾರೆ ಎಂದು ಸಚಿವರ ಗಮನಕ್ಕೆ ತಂದರು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಕೆ.ಸುರೇಶ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಸಿಸಿಎಫ್ ಏಡುಕುಂಡಲು ಮತ್ತಿತರರು ಹಾಜರಿದ್ದರು.

ಜಿಲ್ಲೆಯ ವಿವಿಧೆಡೆ ವರುಣಾರ್ಭಟ



• ಪ್ರಜೋದಯ ವರದಿ

ಹಾಸನ: ನಗರ ಸೇರಿ ಜಿಲ್ಲೆಯ ವಿವಿಧೆಡೆ ಮಂಗಳವಾರ ರಾತ್ರಿ ಗುಡುಗು-ಸಿಡಿಲು, ಜೋರು ಗಾಳಿ ಸಹಿತ ಜೋರು ಮಳೆ ಸುರಿಯಿತು.

ಬಿರು ಬಿಸಿಲಿನಿಂದ ಕಾದ ಕಾವಲಿ ಯಂತಾಗಿದ್ದ ಭೂಮಿಗೆ ಮಳೆರಾಯ ತಂಪೆರೆದ. ಹೊಳೆನರಸೀಪುರ ತಾಲ್ಲೂಕಿನ ಜಿ.ಅಂಕನಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡದ ಮೇಲೆ ಎರಡು ಮರ ಬಿದ್ದು ಹಾನಿ ಸಂಭವಿಸಿದೆ. ನಗರದ ವಿವಿಧೆಡೆ ಮರಗಳು ಧರೆಗುರುಳಿರುವ ವರದಿಯಾಗಿದೆ.

ಸಂಜೆ 4ರ ಸಮಯದಲ್ಲಿ ನಗರದಲ್ಲಿ ಮಳೆ ಸುರಿಯಿತಾದರೂ ಕೆಲವೇ ನಿಮಿಷಗಳಲ್ಲಿ ತಣ್ಣಗಾಯಿತು. ರಾತ್ರಿ 8 ಗಂಟೆಗೆ ಜೋರು ಗಾಳಿಯೊಂದಿಗೆ ಶುರುವಾದ ವರುಣ ಗಂಟೆಗೂ ಹೆಚ್ಚು ಕಾಲ ಆರ್ಭಟಿಸಿದ. ರಭಸದ ಗಾಳಿಯ ಕಾರಣದಿಂದ ಮುನ್ನೆಚ್ಚರಿಕೆ ಕ್ರಮವಾಗಿ ನಗರದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಯಿತು. ಆಲೂರು, ಸಕಲೇಶಪುರ, ಹೊಳೆನರಸೀಪುರ ತಾಲ್ಲೂಕಿನಲ್ಲೂ ಧಾರಾಕಾರ ಮಳೆ ಸುರಿಯಿತು.

ಜೋರು ಮಳೆಯಿಂದಾಗ ನಗರದ ರಸ್ತೆಗಳೆಲ್ಲಾ ಜಲಾವೃತವಾಗಿ ವಾಹನ ಸವಾರರು ಪರದಾಡುವಂತಾಯಿತು. ಅದರಿಂದ ವಾಹನ ಸವಾರರು, ಸಾರ್ವಜನಿಕರು ಪರದಾಡುವಂತಾಯಿತು. ಕಳೆದ ಒಂದು ತಿಂಗಳಿಂದ ಬೇಸಿಗೆಯ ಬೇಗೆಗೆ ಜನರು ಬಸವಳಿದಿದ್ದರು. ಅಧಿಕ ಉಷ್ಣಾಂಶದಿಂದ ತತ್ತರಿಸಿದ್ದ ಸಾರ್ವಜನಿಕರು ಮಂಗಳವಾರದ ಮಳೆಯಿಂದ ನಿಟ್ಟುಸಿರು ಬಿಟ್ಟಿದ್ದಾರೆ. ಕೃಷಿ ಚಟುವಟಿಕೆಗೂ ಈ ಮಳೆ ವರದಾನವಾಗಲಿದೆ.

ಕಾಡಾನೆ ಹಾವಳಿ: ಸ್ಥಳೀಯರೊಂದಿಗೆ ಸಚಿವರ ಚರ್ಚೆ

• ಪ್ರಜೋದಯ ವರದಿ

ಬೇಲೂರು: ತಾಲ್ಲೂಕಿನ ಅರೇಹಳ್ಳಿ ಹೋಬಳಿಯ ಬಾಲಗುಳಿ ಗ್ರಾಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಭೇಟಿ ನೀಡಿ, ಕಾಫಿ ಬೆಳೆಗಾರರು ಹಾಗು ಸ್ಥಳೀಯರೊಂದಿಗೆ ಕಾಡಾನೆ- ಮಾನವ ಸಂಘರ್ಷ ನಿಯಂತ್ರಣ ಕುರಿತು ಮಹತ್ವದ ಚರ್ಚೆ ನಡೆಸಿದರು.

ಗ್ರಾಮದಲ್ಲಿ ನಿರಂತರವಾಗಿ ಕಾಣಿಸಿಕೊಳ್ಳುತ್ತಿರುವ ಕಾಡಾನೆಗಳ ಹಾವಳಿಯಿಂದ ಬೆಳೆ ಹಾನಿ ಹಾಗು ಜನರಲ್ಲಿ ಆತಂಕ ಹೆಚ್ಚುತ್ತಿರುವ ಹಿನ್ನಲೆ ಸ್ಥಳೀಯರು ತಮ್ಮ ಸಮಸ್ಯೆಗಳು ಮತ್ತು ಅಳಲುಗಳನ್ನು ಸಚಿವರ ಮುಂದೆ ವಿವರಿಸಿದರು.

ಈ ವೇಳೆ ಮಾತನಾಡಿದ ಸಚಿವರು, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕೋತಿಗಳನ್ನು ಸ್ಥಳಾಂತರ ಮಾಡುವುದಕ್ಕೂ ಸ್ಥಳೀಯರು ವಿರೋಧ ವ್ಯಕ್ತಪಡಿಸುತ್ತಾರೆ. ಹಾಗಿರುವಾಗ ದೊಡ್ಡ ಗಾತ್ರದ ಕಾಡಾನೆಗಳನ್ನು ಸ್ಥಳಾಂತರಿಸಿದರೆ ಜನರು ಒಪ್ಪಿಕೊಳ್ಳುವ ಪ್ರಶ್ನೆಯೇ ಇಲ್ಲ. ಪ್ರಸ್ತುತ ಕಾಡಾನೆಗಳನ್ನು ಅವುಗಳ ಸ್ವಾಭಾವಿಕ ವಾಸ ಸ್ಥಳದಲ್ಲೇ ಇರಿಸುವ ಮೂಲಕ ಕೆಲವು ಮಟ್ಟಿಗೆ ಸಂಘರ್ಷವನ್ನು ನಿಯಂತ್ರಿಸಬಹುದೆಂದು ಹೇಳಿದರು.

ಈ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸಿದ ಶಾಸಕ ಹೆಚ್.ಕೆ.ಸುರೇಶ್ ಅವರು, ಪ್ರಕೃತಿಯ ಸಮತೋಲನ ಕಾಪಾಡುವ ದೃಷ್ಟಿಯಿಂದ ಕ್ರಮ ಅಗತ್ಯವಿದೆ ಎಂದು ಒತ್ತಾಯಿಸಿದರು.

ಕಾಫಿ ಬೆಳೆಗಾರರು ಮಾತನಾಡಿ, ಕಾಡಾನೆಗಳಿಗೆ ಗಂಟೆ ಕಟ್ಟಿದರೂ ನಮಗೆ ಮುಂಚಿತ ಎಚ್ಚರಿಕೆ ಸಿಗುವಂತೆ ಹಾಗು ರಕ್ಷಣೆ ದೊರಕು ವ್ಯವಸ್ಥೆ ಮಾಡಬೇಕು. ಸಂಘರ್ಷವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸಮಗ್ರ ಹಾಗು ಶಾಶ್ವತ ಯೋಜನೆ ರೂಪಿಸುವ ಅಗತ್ಯತೆ ಇದೆ ಎಂದ ಒತ್ತಾಯಿಸಿದರು. ಪ್ರತಿಕ್ರಿಯಿಸಿದ ಸಚಿವರು, ಅಂತಹ ತಂತ್ರಜ್ಞಾನ ಅಥವಾ ವ್ಯವಸ್ಥೆ ಸಾಧ್ಯವಿದೆಯೇ ಎಂಬುದನ್ನು ಪರಿಶೀಲಿಸಲಾಗುವುದೆಂದು ಭರವಸೆ ನೀಡಿದರು.

ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಸಿಸಿಎಫ್ ಏಡುಕುಂಡಲು, ಡಿಸಿಎಫ್ ಸೌರಭ್ ಕುಮಾರ್, ಗ್ರಾಮಸ್ಥರು ಹಾಜರಿದ್ದರು.

ಜಿಲ್ಲಾ ಕೇಂದ್ರದಲ್ಲೇ ಕುಡಿಯುವ ನೀರಿಗೆ ತೊಂದರೆ

ನಿಗಾ ವಹಿಸಲು ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಶಾಸಕ ಸ್ವರೂಪ್ ಸೂಚನೆ

• ಪ್ರಜೋದಯ ವರದಿ

ಹಾಸನ: ಜಿಲ್ಲಾ ಕೇಂದ್ರದಲ್ಲೇ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುತ್ತಿದ್ದು, ತೊಂದರೆಯಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಸಲಹೆ ನೀಡಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ವರ್ಷ ಬೇಸಿಗೆಯ ಭೀಕರತೆ ಹೆಚ್ಚಿದೆ. ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿದೆ ಎಂದು ನನಗೆ ನಿತ್ಯ ದೂರುಗಳು ಕೇಳಿ ಬರುತ್ತಿವೆ. ಮಹಾನಗರ ಪಾಲಿಕೆಯಿಂದ ಬೋರವೆಲ್ ಕೊರೆಸಲು ಹಣ ಮೀಸಲಿಡಲಾಗುತ್ತದೆ. ಆದರೆ ಮೋಟಾರ್ ಅಳವಡಿಸಲು ಹಣವಿಲ್ಲ ಎನ್ನುತ್ತಾರೆ. ಸಂಪೂರ್ಣ ಕಾಮಗಾರಿ ಮುಗಿಸಲು ಎಷ್ಟು ಬೇಕಾಗುತ್ತದೆಯೋ ಅಷ್ಟು ಅನುದಾನ ಮೊದಲೇ ನಿಗದಿಪಡಿಸುವುದು ಜವಾಬ್ದಾರಿ ಅಲ್ಲವೇ ಎಂದು ಪಾಲಿಕೆ ಆಯುಕ್ತ ಆರ್.ಕೃಷ್ಣಮೂರ್ತಿ ಅವರನ್ನು ಪ್ರಶ್ನಿಸಿದರು.

ಜನರು ಸಂಕಷ್ಟ ಅನುಭವಿಸುವ ಮುನ್ನವೇ ಸಮಸ್ಯೆ ಪರಿಹಾರವಾಗಬೇಕು. ಬೇಸಿಗೆಯಲ್ಲಿ ಆರೋಗ್ಯ ಸಮಸ್ಯೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಯಾವ ರೀತಿಯ ಆಹಾರ ಸೇವನೆ, ಬಿಸಿಲಲ್ಲಿ ಆರೋಗ್ಯ ಕಾಪಾಡಿಕೊಳ್ಳುವುದು ಹೇಗೆ, ಮಕ್ಕಳ ಹಾಗು ವೃದ್ಧರ ಬಗ್ಗೆ ಅಗತ್ಯ ಮುನ್ನೆಚ್ಚರಿಕೆ ಕುರಿತು ಗ್ರಾಮ ಮಟ್ಟದಲ್ಲಿ ಅರಿವು ಮೂಡಿಸಿ ಎಂದು ಸಲಹೆ ನೀಡಿದರು. ತಾಲ್ಲೂಕಿನ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ನೀಡಿ, ರೋಗಿಗಳಿಗೆ ನೀಡಲಾಗುವ ಚಿಕಿತ್ಸೆ ಹಾಗು ಶುಲ್ಕದ ವಿವರ ಕುರಿತು ಸ್ಪಷ್ಟವಾಗಿ ನಾಮಫಲಕಗಳಲ್ಲಿ ಅಳವಡಿಸಬೇಕು. ಪಾರದರ್ಶಕತೆ ಇದ್ದರೆ ಜನರಿಗೆ ಗೊಂದಲ ತಪ್ಪುತ್ತದೆಂದರು.

ಆಲೂಗೆಡ್ಡೆ ಸೇರಿ ಇತರೆ ತರಕಾರಿ ಹಾಗು ವಾಣಿಜ್ಯ ಬೆಳೆಗೆ ಉತ್ತೇಜನ ನೀಡಬೇಕು. ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳು ರೈತರನ್ನು ಸಂಪರ್ಕಿಸಿ ಪ್ರೋತ್ಸಾಹ ನೀಡಬೇಕು. ಅಧಿಕಾರಿಗಳು ಕಚೇರಿಯಲ್ಲೇ ಠಿಕಾಣಿ ಹೂಡದೆ ಹಳ್ಳಿಗಳಿಗೆ ಭೇಟಿ ನೀಡಿ ಜನರಿಗೆ ನೆರವಾಗಬೇಕೆಂದು ಕಿವಿ ಮಾತು ಹೇಳಿದರು.

ನಗರದ ಪಶುವೈದ್ಯಕೀಯ ಕಾಲೇಜಿನ ವಸತಿ ನಿಲಯದಲ್ಲಿ ರ್‍ಯಾಗಿಂಗ್, ಆಕಾಶವಾಣಿ ಸಮೀಪದ ಕಲ್ಲು ಕಟ್ಟಡ ಹಾಸ್ಟೆಲ್‌ನ ಸಮಸ್ಯೆಗಳು ಗಂಭೀರವಾಗಿವೆ. ಇಂತಹ ಘಟನೆ ನಡೆದಾಗ ಸಂಬಂಧಪಟ್ಟ ಅಧಿಕಾರಿಗಳು ಮುತುವರ್ಜಿ ವಹಿಸಿ ತಪ್ಪಿತಸ್ಥ ಮಕ್ಕಳ ಪೋಷಕರಿಗೆ ಹೇಳಬೇಕು. ಅದೇ ಪ್ರಮಾದ ಮರುಕಳಿಸುತ್ತಿದ್ದರೆ ಅಂತಹ ವಿದ್ಯಾರ್ಥಿಗಳನ್ನು ಮನೆಗೆ ಕಳುಹಿಸಿ ಎಂದು ನಿರ್ದೇಶನ ನೀಡಿದರು.

ನಗರದಲ್ಲಿ ಬೀದಿ ನಾಯಿ ಕಾಟ ಹೆಚ್ಚುತ್ತಿರುವ ವಿಚಾರ ಪ್ರಸ್ತಾಪಿಸಿದ ಶಾಸಕರು, ವರ್ತುಲ ರಸ್ತೆಯಲ್ಲಿ ನಾಯಿಗಳ ಹಾವಳಿ ಮಿತಿ ಮೀರಿದೆ. ಅಂಬೇಡ್ಕರ್ ಭವನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಚೇರಿ, ಜಿಲ್ಲಾ ಕ್ರೀಡಾಂಗಣದಲ್ಲಿ ಸಮರ್ಪಕ ಬೆಳಕಿನ ವ್ಯವಸ್ಥೆ ಇಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಮೂಲಸೌಕರ್ಯ ಕೊರತೆ ಇರಬಾರದೆಂದು ಅಧಿಕಾರಿಗಳಿಗೆ ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ರಂಗನಾಥ್ ಅವರು ಮಾತನಾಡಿ, ಎಸ್‌ಎಸ್‌ಎಲ್‌ಸಿ ಹಾಗು ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ಬಂದಿರುವ ಬಗ್ಗೆ ವಿವರಣೆ ನೀಡಿದರು. ಶಿಕ್ಷಣ ಇಲಾಖೆಯನ್ನು ಶಾಸಕರು ಅಭಿನಂದಿಸಿದರು. ನಗರದಲ್ಲಿ ನಿರ್ಮಾಣವಾಗುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾಮಗಾರಿ ಪ್ರಗತಿ ಕುರಿತು ಮಾಹಿತಿ ಪಡೆದ ಶಾಸಕರು, ಶೀಘ್ರ ಪೂರ್ಣಗೊಳಿಸಲು ಸೂಚಿಸಿದರು. ಹಾಗೆಯೇ ಮರದಮ್ಮ ರಸ್ತೆ ಅಗಲೀಕರಣ ಕಾಮಗಾರಿಗೆ ಅರಣ್ಯ ಇಲಾಖೆಯಿಂದ ನಿರಪೇಕ್ಷಣಾ ಪತ್ರ ಬೇಕಿದ್ದು ಶೀಘ್ರ ಕೊಡಿಸುವಂತೆ ಸೂಚಿಸಿದರು.

ಸಭೆಯಲ್ಲಿ ತಹಶೀಲ್ದಾರ್ ಗೀತಾ, ಪಾಲಿಕೆ ಆಯುಕ್ತ ಕೃಷ್ಣಮೂರ್ತಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಿರೀಶ್ ಇದ್ದರು. ಸಭೆ ಆರಂಭಕ್ಕೂ ಮೊದಲು ದಿ. ದೇವರಾಜು ಅರಸು ಅಭಿವೃದ್ಧಿ ನಿಗಮದಡಿ ತಾಲ್ಲೂಕಿನ 21 ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳ ವಿತರಿಸಲಾಯಿತು.

ಸಚಿವರಿಂದ ಹೆದ್ದಾರಿ, ರೈಲ್ವೆ ಕಾಮಗಾರಿ ಪರಿಶೀಲನೆ

• ಪ್ರಜೋದಯ ವರದಿ

ಹಾಸನ: ಹಾಸನ-ಬೇಲೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ373 ಚತುಷ್ಪಥ ರಸ್ತೆ ಕಾಮಗಾರಿ ಕುರಿತು ಮಂಗಳವಾರ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

ಈ ವೇಳೆ, ರಸ್ತೆ ಕಾಮಗಾರಿ ಆರಂಭಿಸಲು ಭೂಸ್ವಾಧೀನ ಪ್ರಕ್ರಿಯೆ ಅವಶ್ಯಕವಾಗಿದ್ದು, ಪರಿಷ್ಕೃತ ಹೆಚ್ಚುವರಿ ಪರಿಹಾರ ಮೊತ್ತ ಕಲ್ಪಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಸಂಬಂಧ ಕೇಂದ್ರ ಮಟ್ಟದ ಸಚಿವರು ಹಾಗು ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆಗೆ ಶೀಘ್ರ ಪರಿಹಾರ ಕಂಡು ಕೊಳ್ಳಲಾಗುವುದೆಂದು ಸಚಿವರು ಭರವಸೆ ನೀಡಿದರು. ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಸಂಬಂಧಪಟ್ಟ ಅಧಿಕಾರಿಗಳು ಇದ್ದರು.

ಹಾಸನದಿಂದ ಚಿಕ್ಕಮಗಳೂರು ವರೆಗೆ ರೈಲ್ವೆ ಸಂಪರ್ಕ ಕಲ್ಪಿಸುವ ಯೋಜನೆಗೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳ ಬಗ್ಗೆ ಸಚಿವ ಕೃಷ್ಣಬೈರೇಗೌಡ ಅವರು, ಅಧಿಕಾರಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.

ಬೇಲೂರು ರೈಲ್ವೆ ನಿಲ್ದಾಣ ಕಾಮಗಾರಿ ವೀಕ್ಷಣೆ ಮಾಡಿ ಅಧಿಕಾರಿಗಳ ಜೊತೆ ಸಭೆ ನಡೆಸಿ, ಕಾಮಗಾರಿ ವೇಗಗೊಳಿಸುವುದು, ತಾಂತ್ರಿಕ ನಿರ್ವಹಣಾತ್ಮಕ ಅಂಶಗಳನ್ನು ಪರಿಶೀಲಿಸುವುದರ ಮೇಲೆ ವಿಶೇಷ ಗಮನ ಹರಿಸುವಂತೆ ಸೂಚನೆ ನೀಡಿದ ಅವರು, ಯೋಜನೆಯನ್ನು ಶೀಘ್ರಗತಿ ಯಲ್ಲಿ ಮುಂದುವರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿದರು.

ಸಿದ್ದರಾಮಯ್ಯ ಅವರನ್ನೇ ಮುಂದುವರಿಸಲು ಹೇಳಿದ್ದೇವೆ

• ಪ್ರಜೋದಯ ವರದಿ

ಬೆಂಗಳೂರು: ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಅವರೇ ಮುಂದುವರಿಯ ಬೇಕೆಂಬ ಅಭಿಪ್ರಾಯವನ್ನು ನಾವೆಲ್ಲಾ ಹೈಕಮಾಂಡ್‌ಗೆ ಹೇಳಿದ್ದೇವೆಂದು ಶಾಸಕ ಕೆ.ಎನ್.ರಾಜಣ್ಣ ಅವರು ಹೇಳಿದರು.

ಮಂಗಳವಾರ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅಧಿಕಾರದಲ್ಲಿ ಮುಂದುವರಿಯಲು ಸಿದ್ದರಾಗಿದ್ದಾರೆ. ಪದತ್ಯಾಗಕ್ಕೂ ಸಿದ್ದರಾಗಿ ದ್ದಾರೆ. ಹೈಕಮಾಂಡ್ ಏನು ಹೇಳುತ್ತದೆಯೊ ಅದಕ್ಕೆ ಬದ್ದರಾಗಿ ದ್ದಾರೆಂದರು.

ಇದು ಆತುರದಲ್ಲಿ ತೆಗೆದುಕೊಳ್ಳುವ ನಿರ್ಧಾರವಲ್ಲ, ಪಕ್ಷದ ಭವಿಷ್ಯ ಅದರಲ್ಲಿ ಅಡಗಿದೆ. ಹೀಗಾಗಿ, ಸೂಕ್ತನಿರ್ಧಾರವನ್ನು ಹೈಕಮಾಂಡ್ ತೆಗೆದುಕೊಳ್ಳುವ ವಿಶ್ವಾಸವಿದೆ. ಗೊಂದಲ ಮುಂದುವರಿಯಲು ಹೈ ಕಮಾಂಡ್ ಅವಕಾಶ ನೀಡಬಾರದು. ಸಿದ್ದರಾಮಯ್ಯ ಅವರ ಜೊತೆಗೆ ಚರ್ಚೆ ಮಾಡಿದಾಗಲೂ ಅವರು ಮುಕ್ತ ಮನಸ್ಸಿನಲ್ಲಿದ್ದಾರೆ. ರಾಹುಲ್ ಗಾಂಧಿಯ ಸೂಚನೆ ಪಾಲಿಸುವುದಾಗಿ ಹೇಳಿದ್ದಾರೆ. ಆಗ ನಿಮ್ಮೆಲ್ಲರ ಸಹಕಾರ ಇರಬೇಕೆಂಬುದು ಅವರ ಅಭಿಮತ. ಅಧಿಕಾರ ಶಾಶ್ವತವಲ್ಲ, ಅಧಿಕಾರ ಕಳೆದುಕೊಂಡವರು ಗಳಿಸುತ್ತಾರೆಂದರು.

ಇಂದು ಮಲೆನಾಡು ಶಿಕ್ಷಣ ಸಮಿತಿಯ ಅಂತಿಮ ತೀರ್ಪು

ಹೈಕೋರ್ಟ್ ಆದೇಶದತ್ತ ಎಲ್ಲರ ಚಿತ್ತ

ಹಾಸನ: ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಆಡಳಿತ ಮಂಡಳಿ ಅಧಿಕಾರಕ್ಕಾಗಿ ಎರಡು ತಂಡಗಳ ನಡುವೆ ನಡೆಯುತ್ತಿರುವ ಹಗ್ಗಜಗ್ಗಾಟಕ್ಕೆ ಬುಧವಾರ ಹೈಕೋರ್ಟ್ ಅಂತಿಮ ತೀರ್ಪು ಪ್ರಕಟಿಸುವ ಮೂಲಕ ತೆರೆ ಎಳೆಯುವ ನಿರೀಕ್ಷೆ ಇದೆ.

ಎರಡು ತಂಡಗಳ ನಡುವೆ ಗೊಂದಲ ಏರ್ಪಟ್ಟು ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿ ದ್ದರಿಂದ ಕೋರ್ಟ್ ಸೂಚನೆಯಂತೆ ಕಳೆದು ಫೆ.12ರಂದು ಅವಿಶ್ವಾಸ ಮಂಡನೆ ನಡೆದಿತ್ತು.

ಅಂದು ನಡೆದಿದ್ದ ಸಭೆಯಲ್ಲಿ 24 ನಿರ್ದೇಶಕರ ಪೈಕಿ ಅವಿಶ್ವಾಸ ಪರವಾಗಿ ಸಂಸ್ಥೆಯ ಮಾಜಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರನ್ನೊಳಗೊಂಡ 14 ಸದಸ್ಯರು, ವಿರೋಧವಾಗಿ ಹಾಲಿ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಅವರನ್ನೊಳಗೊಂಡ 10 ಸದಸ್ಯರು ಕೈಎತ್ತುವ ಮೂಲಕ ಮತ ಚಲಾಯಿಸಿದರು. ಈ ಪ್ರಕ್ರಿಯೆ ನೋಡಿಕೊಳ್ಳಲು ಹೈಕೋರ್ಟ್ ಹಿರಿಯ ವಕೀಲ ಉಮಾಶಂಕರ್ ಅವರನ್ನು ವೀಕ್ಷಕರನ್ನಾಗಿ ನೇಮಕ ಮಾಡಿತ್ತು. ವೀಕ್ಷಕರ ಸಮ್ಮುಖದಲ್ಲೇ ಅವಿಶ್ವಾಸ ಮಂಡನೆ ಪ್ರಕ್ರಿಯೆ ನಡೆದಿದ್ದು, ಸದಸ್ಯರ ಅಭಿಪ್ರಾಯ, ಸಭೆಯ ವಿಡಿಯೋ, ಸಹಿ ಹಾಗು ಪ್ರಕ್ರಿಯಾತ್ಮಕ ವರದಿಗಳನ್ನು ಸಂಗ್ರಹಿಸಿಕೊಂಡು ಫೆ.16ರಂದು ಹೈಕೋರ್ಟ್‌ಗೆ ಸಲ್ಲಿಕೆ ಮಾಡಿದ್ದರು. ಆ ನಂತರ ನ್ಯಾಯಾಲಯದಲ್ಲಿ ವಾದ-ಪ್ರತಿವಾದ ನಡೆದಿದ್ದು, ಅಂತಿಮ ತೀರ್ಪನ್ನು ಕಾಯ್ದಿರಿಸಲಾಗಿತ್ತು. ಬುಧವಾರ ಮಧ್ಯಾಹ್ನ 2.30ಕ್ಕೆ ಹೈಕೋರ್ಟ್ ಅಂತಿಮ ತೀರ್ಪನ್ನು ಪ್ರಕಟಿಸಲಿದೆ. ಹೀಗಾಗಿ ಎಲ್ಲರ ಗಮನ ತೀರ್ಪಿನತ್ತ ನೆಟ್ಟಿದೆ.

ಸಂಸ್ಥೆಯ ಮಾಜಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರ ತಂಡ ಈ ಬಗ್ಗೆ ಪ್ರತಿಕ್ರಿಯಿಸಿ, ಅವಿಶ್ವಾಸ ಮಂಡನೆ ವೇಳೆ 24 ಸದಸ್ಯರಲ್ಲಿ 10 ಜನರು ಅವಿಶ್ವಾಸ ನಿರ್ಣಯದ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿದರೆ, 14 ಜನರು ಅವಿಶ್ವಾಸದ ಪರವಾಗಿ ಮತ ಚಲಾಯಿಸಿದ್ದಾರೆ. ಈ ಬಗ್ಗೆ ಹೈಕೋರ್ಟ್ ನೇಮಕ ಮಾಡಿದ್ದ ವೀಕ್ಷಕರು ವರದಿಯನ್ನು ನ್ಯಾಯಾಲಯದ ಮುಂದೆ ಮಂಡಿಸಿದ್ದಾರೆ. ನ್ಯಾಯಾಲಯದ ಮೇಲೆ ನಂಬಿಕೆ ಇದ್ದು ನಮಗೆ ಗೆಲುವಾಗುವ ವಿಶ್ವಾಸವಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಾಲಿ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಅವರ ತಂಡವೂ ಪ್ರತಿಕ್ರಿಯಿಸಿ, 2/3 ಮೆಜಾರಿಟಿ ಅವಿಶ್ವಾಸ ಮಂಡನೆ ಮಾಡಬೇಕಿತ್ತು. ಅವಿಶ್ವಾಸ ಸಾಬೀತು ಪಡಿಸಲು 16 ನಿರ್ದೇಶಕರ ಬೆಂಬಲ ಬೇಕಿತ್ತು. ಈ ಬಗ್ಗೆ ಹೈಕೋರ್ಟ್‌ಗೆ ಅವಶ್ಯ ದಾಖಲೆಗಳನ್ನು ಒದಗಿಸಿರುವುದರಿಂದ ಮರು ಪರಿ ಶೀಲನೆಗೆ ಸೂಚಿಸುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

ರೈಲ್ವೆ ಸೇತುವೆ ಕಾಮಗಾರಿ: ಸಂಚಾರ ವ್ಯತ್ಯಯ

• ಪ್ರಜೋದಯ ವರದಿ

ಹಾಸನ: ಹೊಳೆನರಸೀಪುರ ಮತ್ತು ಮಂದಗೆರೆ ರೈಲ್ವೆ ನಿಲ್ದಾಣಗಳ ನಡುವೆ ಸೇತುವೆ ಕಾಮಗಾರಿ ಕೈಗೊಂಡಿರುವ ಹಿನ್ನಲೆಯಲ್ಲಿ ಕೆಲ ರೈಲುಗಳ ಸೇವೆಯಲ್ಲಿ ಬದಲಾವಣೆ ಮಾಡಲಾಗಿದೆ.

ಮೇ 4ರಂದು ಮೈಸೂರು-ಅರಸೀಕೆರೆ ಪ್ಯಾಸೆಂಜರ್ (ರೈಲು ಸಂ. 56266), ಅರಸೀಕೆರೆ-ಮೈಸೂರು ಪ್ಯಾಸೆಂಜರ್ (ರೈಲು ಸಂ. 56265) ಹಾಗು ಮೈಸೂರು-ಎಸ್‌ಎಂವಿಟಿ ಬೆಂಗಳೂರು ಪ್ಯಾಸೆಂಜರ್ (ರೈಲು ಸಂ. 06269) ರೈಲುಗಳ ಸಂಚಾರ ರದ್ದುಗೊಳಿಸಲಾಗಿದೆ. ಮೇ 4 ರಂದು ಮೈಸೂರಿನಿಂದ ಹೊರಡುವ ಮೈಸೂರು- ಯಶವಂತಪುರ ಎಕ್ಸ್‌ಪ್ರೆಸ್ ರೈಲನ್ನು ಮಾರ್ಗಮಧ್ಯೆ ಸುಮಾರು 2 ಗಂಟೆ 30 ನಿಮಿಷ ನಿಲ್ಲಿಸ ಲಾಗುತ್ತದೆ. ಏ. 29 ಮತ್ತು ಮೇ 6ರಂದು ಅರಸೀಕೆರೆ- ಮೈಸೂರು ಎಕ್ಸ್‌ಪ್ರೆಸ್ (56265) ರೈಲು ಅರಸೀಕೆರೆ ಯಿಂದ ಹಾಗು ಮೈಸೂರು-ಎಸ್‌ಎಂವಿಟಿ ಬೆಂಗಳೂರು ಪ್ಯಾಸೆಂಜರ್ (06269) ರೈಲು ಮೈಸೂರಿನಿಂದ ನಿಗದಿತ ಸಮಯಕ್ಕಿಂತ 2 ಗಂಟೆ 30 ನಿಮಿಷ ತಡವಾಗಿ ಹೊರಡಲಿದೆ ಎಂದು ಮೈಸೂರು ವಿಭಾಗದ ಹಣಕಾಸು ವ್ಯವಸ್ಥಾಪಕ ಹಾಗು ಸಾರ್ವಜನಿಕ ಸಂಪರ್ಕಾಧಿಕಾರಿ ಪೃಥ್ವಿ ಎಸ್. ಹುಲ್ಲತ್ತಿ ಅವರು ತಿಳಿಸಿದ್ದಾರೆ.

ಭದ್ರಾ ಅಭಯಾರಣ್ಯದಲ್ಲಿ ಸಾಫ್ಟ್ ರಿಲೀಸ್ ಸೆಂಟರ್ ನಿರ್ಮಾಣ: ಕೃಷ್ಣಬೈರೇಗೌಡ

6 ತಿಂಗಳ ಬಳಿಕ ಭಾಗಶಃ ಕಾಡಾನೆಗಳ ಸ್ಥಳಾಂತರ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯಲ್ಲಿರುವ ಕಾಡಾನೆಗಳನ್ನು ಭಾಗಶಃ ಸೆರೆ ಹಿಡಿದು ಮುಂದಿನ ಆರು ತಿಂಗಳಲ್ಲಿ ಸೆರೆ ಹಿಡಿದು ಭದ್ರಾ ಅಭಯಾರಣ್ಯದಲ್ಲಿ ನಿರ್ಮಾಣಗೊಳ್ಳುತ್ತಿರುವ ಸಾಫ್ಟ್ ರಿಲೀಸ್ ಸೆಂಟರ್ (ಆನೆಧಾಮ)ಕ್ಕೆ ಸ್ಥಳಾಂತರ ಮಾಡುವ ಕಾರ್ಯ ಆರಂಭಿಸಲಾವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಭರವಸೆ ನೀಡಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರ ಒತ್ತಾಯದಂತೆ ಕಾಡಾನೆಗಳನ್ನು ಸ್ಥಳಾಂತರ ಮಾಡುವ ಪ್ರಸ್ತಾವನೆ ಎರಡು ವರ್ಷಗಳ ಹಿಂದೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದರೂ ಅನುಮತಿ ಲಭ್ಯವಾಗಿಲ್ಲ. ಆದರೆ, ಸಾಫ್ಟ್ ರಿಲೀಸ್ ಸೆಂಟರ್ ಸ್ಥಾಪನೆಗೆ ಹಣ ಲಭ್ಯವಿದ್ದು, ಹೈಕೋರ್ಟ್ ಮಾರ್ಗಸೂಚಿಗಳಂತೆ ಕಾಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರ ಮಾಡುತ್ತೇವೆಂದು ತಿಳಿಸಿದರು.

ಸಾಫ್ಟ್ ರಿಲೀಸ್ ಸೆಂಟರ್ ನಿರ್ಮಾಣವಾಗುವವರೆಗೂ ನಿಖರವಾಗಿ ಕಾಡಾನೆಗಳನ್ನು ಟ್ರ್ಯಾಕಿಂಗ್ ಮಾಡಿ ಜನರಿಗೆ ಮಾಹಿತಿ ನೀಡಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಕಾಡಾನೆ ಜನವಸತಿ ಪ್ರದೇಶಕ್ಕೆ ಬರುತ್ತಿರುವುದನ್ನು ಗಮನಿಸಿ, ಹೈಅಲರ್ಟ್ ಘೋಷಿಸಿ, ತ್ವರಿತವಾಗಿ ಜನರಿಗೆ ಎಚ್ಚರಿಕೆ ನೀಡುವ ಕೆಲಸ ಆಗಬೇಕೆಂದು ತಿಳಿಸಿದ್ದೇನೆ. ನಿಖರ ಮಾಹಿತಿ ನೀದರೆ ಮಾತ್ರ ಕಾಡಾನೆ-ಮಾನವ ಸಂಘರ್ಷ ತಪ್ಪಿಸಲು ಸಾಧ್ಯವಾಗುತ್ತದೆ ಎಂದರು.

1981ರಿಂದ ವನ್ಯಜೀವಿಗಳ ಸಂರಕ್ಷಣೆಗೆ ಕಾಯ್ದೆ ಜಾರಿಯಾದಾಗಿನಿಂದ ಪ್ರಾಣಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಮಾನವ-ಕಾಡಾನೆ ಸಂಘರ್ಷವೂ ಹೆಚ್ಚಾಗಿದೆ. ಬೆಳೆಹಾನಿ ಮತ್ತು ಪ್ರಾಣಹಾನಿ ಸಂಭವಿಸಿದಾಗ ಜನರಿಗೆ ಸಮರ್ಪಕ ಉತ್ತರ ನೀಡುವುದು ಕಷ್ಟವಾಗುತ್ತಿದೆ. ಕಾಡಾನೆ ತಡೆಗಟ್ಟಲು ಸರ್ಕಾರ ಸಾವಿರಾರು ಕೋ. ರೂ. ವೆಚ್ಚ ಮಾಡುತ್ತಿದೆ. ಜಿಲ್ಲೆಯಲ್ಲಿ ಸುಮಾರು 35 ಕಿಲೋಮೀಟರ್ ರೈಲ್ವೆ ಬ್ಯಾರಿಕೇಡ್ ನಿರ್ಮಾಣವಾಗಿದೆ. ಇನ್ನೂ ಕೆಲವು ಪ್ರದೇಶಗಳಲ್ಲಿ ಈ ಕೆಲಸ ಮುಂದುವರಿಯಬೇಕಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ 2024ರಲ್ಲಿ ಕಾಡಾನೆ ದಾಳಿಯಿಂದ 6 ಮಂದಿ ಸಾವನ್ನಪ್ಪಿದ್ದರೆ, ಕಳೆದ ವರ್ಷ ಅದು 3ಕ್ಕೆ ಇಳಿಕೆಯಾಗಿದೆ. ಈ ವರ್ಷವೂ ಬೇಲೂರು ಭಾಗದಲ್ಲಿ ಒಂದು ಸಾವಿನ ಘಟನೆ ಸಂಭವಿಸಿದೆ. ಅರಣ್ಯ ಇಲಾಖೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರೂ, ಕಾಡಾನೆಗಳು ಮಾನವ ವಾಸ ಪ್ರದೇಶಗಳಿಗೆ ಬರುತ್ತಿರುವುದನ್ನು ಸಂಪೂರ್ಣವಾಗಿ ತಡೆಯಲು ಸಾಧ್ಯವಾಗುತ್ತಿಲ್ಲ. ಕಾಡಾನೆ

» ನಾಲ್ಕನೇ ಪುಟದಲ್ಲಿ

ಸೂಚನೆ ಉಲ್ಲಂಘಿಸಿದರೆ ಪ್ರಕರಣ

ಜನರು ಸಹ ಅರಣ್ಯ ಇಲಾಖೆಯ ಸೂಚನೆಗಳನ್ನು ಪಾಲಿಸಬೇಕು. ಬೆಳಿಗ್ಗೆ 8 ಗಂಟೆಯೊಳಗೆ ಹೊರ ಚಟುವಟಿಕೆ ತಪ್ಪಿಸಬೇಕು ಹಾಗು ಸಂಜೆ 6 ಗಂಟೆಯ ನಂತರ ಅನಗತ್ಯ ಓಡಾಟ ಕಡಿಮೆ ಮಾಡಬೇಕು. ಸೂಚನೆಗಳನ್ನು ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಸಚಿವರು ಎಚ್ಚರಿಸಿದರು.

C M Y K C M Y K C M Y K C M Y K

■ **ಫಲಿತಾಂಶ ಹೆಚ್ಚಾಗಿರುವಷ್ಟೇ ಪ್ರಮಾಣದಲ್ಲಿ ಪಿಯುಸಿ ಪ್ರವೇಶವನ್ನು ಹೆಚ್ಚಿಸಬೇಕಾದ ಒತ್ತಡದಲ್ಲಿ ಸರಕಾರ ಸಿಲುಕಿದೆ. ಹಾಗೆಂದು, ಸರಕಾರಿ ಪಿಯು ಕಾಲೇಜುಗಳಲ್ಲಿ ಪ್ರವೇಶ ಸಂಖ್ಯೆ ಏರಿಸುವುದಕ್ಕೆ ಉಪನ್ಯಾಸಕರ ಕೊರತೆ ಸಹಜವಾಗಿಯೇ ಕಾಡುತ್ತದೆ. ಈಗಲೇ ಅನೇಕ ಕಾಲೇಜುಗಳು ಅತಿಥಿ ಉಪನ್ಯಾಸಕರ ಮೇಲೆ ನಡೆಯುತ್ತಿದೆ.**

ಪರೀಕ್ಷೆ ನಡೆಸೋದು ಬರೀ ಪಾಸ್ ಮಾಡೋಕಲ್ಲ!

ಬದಲಾವಣೆ ಜಗದ ನಿಯಮ. ಆದರೆ ಯಾವುದೇ ಬದಲಾವಣೆ ನೈಜವಾಗಿ ಆಗಬೇಕಾದ ಕನಿಷ್ಠ ಸಮಯ ಸರ್ವೇ ಸಾಮಾನ್ಯ. ಆದರೆ ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬಂದಿರುವ ಐತಿಹಾಸಿಕ ಫಲಿತಾಂಶ ನೈಜವಾಗಿ ಆಗಿರುವ ಪ್ರಕ್ರಿಯೆಯೇ ಎನ್ನುವ ಪ್ರಶ್ನೆಯನ್ನು ಕೇಳಿದಾಗ ಸರಕಾರ, ಸಚಿವ ಮಧು ಬಂಗಾರಪ್ಪ, ಇಲಾಖೆ ಅಧಿಕಾರಿಗಳು ಹೌದು ಎನ್ನುವ ಉತ್ತರ ನೀಡುತ್ತಿದ್ದಾರೆ ಹೊರತು, ಶಿಕ್ಷಕರು ಹಾಗೂ ಶೈಕ್ಷಣಿಕ ಕ್ಷೇತ್ರದ ತಜ್ಞರನ್ನು ಕೇಳಿದಾಗ ಇಲ್ಲ ಎನ್ನುವವರ ಸಂಖ್ಯೆಯೇ ಹೆಚ್ಚಾಗಿದೆ.

ಕಳೆದ ವಾರ ಪ್ರಕಟವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆ 1ರ ಫಲಿತಾಂಶವೇ ಸದ್ಯ ರಾಜ್ಯದ ಹಾಟ್ ಟಾಪಿಕ್ ಎಂದರೆ ತಪ್ಪಾಗುವುದಿಲ್ಲ. ತೃತೀಯ ಭಾಷಾ ಪರೀಕ್ಷೆ ಎರಡು ದಿನ ಬಾಕಿಯಿರುವಾಗ ಅಂಕದ ಬದಲು ಗ್ರೇಡಿಂಗ್ ವ್ಯವಸ್ಥೆಯ ಘೋಷಣೆ, ಬಳಿಕ ಹೈಕೋರ್ಟ್ ಮಧ್ಯಪ್ರವೇಶ, ಪುನಃ ಗ್ರೇಡ್ ಬದಲು ಅಂಕ ನೀಡಲು ಹೈಕೋರ್ಟ್ ಸೂಚನೆ, ಅದಕ್ಕೆ ಸರಕಾರದ ಮೇಲ್ಮನವಿಯ ಸರ್ಕಸ್ ಎಲ್ಲದರ ಹೊರತಾಗಿ ಫಲಿತಾಂಶ ಪ್ರಕಟವಾಗಿದೆ.

ಈ ಎಲ್ಲ ಗೊಂದಲಗಳ ಹೊರತಾಗಿಯೂ ಶಿಕ್ಷಣ ಸಚಿವ ಮಧು ಬಂಗಾರಪ್ಪನವರು ಸುದ್ದಿಗೋಷ್ಠಿಯಲ್ಲಿ ರಾಜ್ಯದಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಪೈಕಿ ಶೇ.94ರಷ್ಟು ವಿದ್ಯಾರ್ಥಿಗಳು ಪಾಸಾಗಿದ್ದಾರೆ ಎಂದು ಘೋಷಿಸಿದರು.

ಇನ್ನೊಂದು ರೀತಿ ಹೇಳುವುದಾದರೆ ಪರೀಕ್ಷೆ ಬರೆದಿದ್ದ 7.70 ಲಕ್ಷ ವಿದ್ಯಾರ್ಥಿಗಳ ಪೈಕಿ 45 ಸಾವಿರ ಚಿಲ್ಲರೆ ವಿದ್ಯಾರ್ಥಿಗಳು ಮಾತ್ರ ಫೇಲಾಗಿದ್ದಾರೆ ಎನ್ನುವುದು. ಅದರಲ್ಲಿಯೂ ಮೊದಲ ಸ್ಥಾನದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರೀಕ್ಷೆ ಬರೆದಿದ್ದ 27,707 ವಿದ್ಯಾರ್ಥಿ ಗಳ ಪೈಕಿ 400 ಚಿಲ್ಲರೆ ವಿದ್ಯಾರ್ಥಿಗಳು ಫೇಲಾಗಿದ್ದಾರೆ.

ಇನ್ನು ಕಳೆದ ವರ್ಷ ಶೇ.60ರಷ್ಟು ಪಾಸಿಂಗ್ ನೊಂದಿಗೆ ಕೊನೆಯ ಸ್ಥಾನದಲ್ಲಿದ್ದ ಯಾದಗಿರಿಯಲ್ಲಿ ಏಕಾಏಕಿ ಶೇ.30ರಷ್ಟು ಪಾಸಿಂಗ್ ಪರ್ಸೆಂಟ್ ಹೆಚ್ಚಾಗಿದೆ. ಈ ಬಾರಿ ಕೊನೆಯ ಸ್ಥಾನಕ್ಕೆ ಕುಸಿದಿರುವ ಕಲಬುರಗಿಯೂ ಶೇ.86ರಷ್ಟು ಫಲಿತಾಂಶವನ್ನು ಪಡೆದುಕೊಂಡಿದೆ!

ಇನ್ನು ವೈಯಕ್ತಿಕವಾಗಿ ವಿದ್ಯಾರ್ಥಿಗಳ ಫಲಿತಾಂಶವನ್ನು ಗಮನಿಸುವುದಾದರೆ 625ಕ್ಕೆ 625 ಅಂಕ ಪಡೆದವರ ಸಂಖ್ಯೆ ಏಳರಲ್ಲಿದೆ. 624 ಅಂಕವನ್ನು 32 ವಿದ್ಯಾರ್ಥಿಗಳು, 623 ಅಂಕವನ್ನು 28 ವಿದ್ಯಾರ್ಥಿಗಳು, 622 ಅಂಕವನ್ನು 74 ವಿದ್ಯಾರ್ಥಿಗಳು, 621 ಅಂಕವನ್ನು 98 ವಿದ್ಯಾರ್ಥಿಗಳು, 620 ಅಂಕವನ್ನು 150 ವಿದ್ಯಾರ್ಥಿಗಳು ಪಡೆದಿದ್ದಾರೆ.

ಮಧು ಬಂಗಾರಪ್ಪನವರು ಈ ಫಲಿತಾಂಶವನ್ನು ಪ್ರಕಟಿಸುತ್ತಿದ್ದಂತೆ ರಾಜ್ಯದ ಬಹುತೇಕರು ಖುಷಿ ಪಡುವುದಕ್ಕಿಂತ ಅಚ್ಚರಿಗೆ ಒಳಗಾದರು. ಏಕೆಂದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.30ರಷ್ಟು ಹೆಚ್ಚುವರಿ ಫಲಿತಾಂಶ ಪ್ರಕಟವಾಗಿದೆ. ಈ ಪ್ರಮಾಣದಲ್ಲಿ ಫಲಿತಾಂಶದ ಏರಿಕೆಗೆ ಸುಮಾರು 10 ಪುಟಗಳ ಸುದೀರ್ಘ ಆಕ್ಷನ್ ಪ್ಲಾನ್ ಅನ್ನು ಸಚಿವರು ಹಾಗೂ ಇಲಾಖೆ ನೀಡಿದೆ. ಆದರೆ, ಈ ಪ್ಲಾನ್ ತಳಮಟ್ಟದಲ್ಲಿ ಎಷ್ಟರ ಮಟ್ಟಿಗೆ ಜಾರಿಯಾಗಿದೆ ಎನ್ನುವ ಪ್ರಶ್ನೆಗೆ ಬಹುತೇಕರ ಬಳಿ ಉತ್ತರವಿಲ್ಲ. ಅಷ್ಟಾದರೂ, ಭಾರಿ ಫಲಿತಾಂಶ ಸಿಕ್ಕಿರುವ ಹಿಂದಿನ ಮರ್ಮವೇನು? ಎನ್ನುವುದು ಬಹುತೇಕರ ಕುತೂಹಲ!

ಫಲಿತಾಂಶವನ್ನು ಇನ್ನಷ್ಟು ಸೂಕ್ಷ್ಮವಾಗಿ ನೋಡುವುದಾದರೆ, ತೀವ್ರ ಗೊಂದಲಕ್ಕೆ ಕಾರಣವಾಗಿರುವ ತೃತೀಯ ಭಾಷಾ -ಫಲಿತಾಂಶವನ್ನು ಹೈಕೋರ್ಟ್ ಸೂಚನೆಯಂತೆ ಅಂಕದ ಆಧಾರದಲ್ಲಿ ನೀಡಲಾಗಿದೆ. ಒಂದು ವೇಳೆ ಗ್ರೇಡಿಂಗ್‌ನಲ್ಲಿಯೇ ಮುಂದುವರೆದಿದ್ದರೆ ಮತ್ತೆ 16ರಿಂದ 17 ಸಾವಿರ ವಿದ್ಯಾರ್ಥಿಗಳು ಪಾಸಾಗುತ್ತಿದ್ದರು.

ಅಂದರೆ, ಫೇಲಾದವರ ಸಂಖ್ಯೆ 30 ಸಾವಿರದ ಆಸುಪಾಸಿಗೆ ಬಂದು ನಿಲ್ಲುತ್ತಿತ್ತು. ಅಂದರೆ ಪರೀಕ್ಷೆ ನಡೆಸುವ ಉದ್ದೇಶ, ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಒರೆಗಲ್ಲಿಗೆ ಹಚ್ಚುವುದೇ ಅಥವಾ ಪಾಸ್ ಮಾಡುವುದೇ? ಪಾಸ್ ಮಾಡುವುದೇ ಉದ್ದೇಶವಾದರೆ, ಈ ಪ್ರಮಾಣದಲ್ಲಿ ಕಷ್ಟಪಟ್ಟು ಪರೀಕ್ಷೆಗಳನ್ನು ನಡೆಸುವುದೇಕೆ? ಎನ್ನುವ ಪ್ರಶ್ನೆಗಳು ಏಳುತ್ತಿವೆ.

ಹಾಗೆ ನೋಡಿದರೆ, 10 ರಿಂದ 15 ವರ್ಷದ ಹಿಂದಿನ ಫಲಿತಾಂಶವನ್ನು ಗಮನಿಸಿದರೆ ಭಾರಿ ಪ್ರಮಾಣದಲ್ಲಿ ಬದಲಾವಣೆಯಾಗಿದೆ ಎನ್ನುವುದು ಸ್ಪಷ್ಟ. ಒಟ್ಟಾರೆ ರಾಜ್ಯದ ಫಲಿತಾಂಶ ಶೇ.65ರಷ್ಟು ದಾಟಿದರೆ ಬಹುದೊಡ್ಡ ಸಾಧನೆ ಎನ್ನಲಾಗುತ್ತಿತ್ತು. ಇದಿಷ್ಟೇ ಅಲ್ಲದೇ, ವೈಯಕ್ತಿಕವಾಗಿಯೂ ವಿದ್ಯಾರ್ಥಿಗಳು ಶೇ.70ರಷ್ಟು ಅಥವಾ ಪ್ರಥಮ ಶ್ರೇಣಿ ಪಾಸಾದರೆ ಬಹುದೊಡ್ಡ ಸಾಧನೆ ಎನ್ನುವಂತಾಗಿತ್ತು.

ಆದರೀಗ ಉತ್ತಮ ಶ್ರೇಣಿ(ಶೇ.75ರಷ್ಟು ಮೇಲ್ಪಟ್ಟು) ಪಡೆದ ವಿದ್ಯಾರ್ಥಿಗಳ ಸಂಖ್ಯೆಯೇ ಶೇ.25ರಿಂದ 30ರ ಆಸುಪಾಸಿನಲ್ಲಿದೆ. ಇನ್ನು ಪ್ರಥಮ ಶ್ರೇಣಿಯಲ್ಲಿ ಶೇ.40ರಿಂದ 45ರಷ್ಟಿದೆ. ಹಾಗೆಂದು, ಈ ಪ್ರಮಾಣದಲ್ಲಿ ಫಲಿತಾಂಶ ಸುಧಾರಿಸಲು, ಶೈಕ್ಷಣಿಕವಾಗಿ ಕ್ರಾಂತಿಕಾರಕ ಬದಲಾವಣೆಯಾಗಿದೆ ಅಥವಾ ಕ್ವಾಲಿಟಿಯಲ್ಲಿ ಬಹುದೊಡ್ಡ ಬದಲಾವಣೆ ಎನ್ನುವ ಮಾತನ್ನು ಈಗಲೂ ಶಿಕ್ಷಕರಾಗಲಿ, ಶಿಕ್ಷಣ ತಜ್ಞರಾಗಲಿ ಒಪ್ಪುತ್ತಿಲ್ಲ.

ಇದೇ ವರ್ಷದ ಉದಾಹರಣೆ ಕೊಟ್ಟು ಹೇಳುವುದಾದರೆ, ಖಾಸಗಿ ಶಾಲೆಯೊಂದರಲ್ಲಿ ಅಭ್ಯಾಸ ಮಾಡಿದ್ದ ವಿದ್ಯಾರ್ಥಿ ಆ ಶಾಲೆಯ ನಾಲ್ಕು ಆಂತರಿಕ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ ಫೇಲಾಗಿದ್ದ. ಆದ್ದರಿಂದ ಆ ಶಾಲೆಯ ಆಡಳಿತ ಮಂಡಳಿ ಆ ವಿದ್ಯಾರ್ಥಿಯ ಫಲಿತಾಂಶದಲ್ಲಿ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿರಲಿಲ್ಲ. ಆದರೆ, ಕಳೆದ ವಾರದ ಪ್ರಕಟವಾದ ಫಲಿತಾಂಶದಲ್ಲಿ ಅದೇ ವಿದ್ಯಾರ್ಥಿ ಶೇ.92-93ರ ಆಸುಪಾಸಿನಲ್ಲಿ ಪಾಸಾಗಿದ್ದಾನೆ!

ಈ ವಿಷಯವನ್ನು ಸ್ವತಃ ಆ ಶಾಲೆಯ ಮುಖ್ಯಸ್ಥರೇ ಹಂಚಿಕೊಂಡಿದ್ದರು. ಮುಖ್ಯ ಪರೀಕ್ಷೆಯ ಹಿಂದಿನ ವಾರ ನಡೆದ ಪರೀಕ್ಷೆಯಲ್ಲಿಯೂ ಫೇಲಾಗಿದ್ದ ವಿದ್ಯಾರ್ಥಿ ಪರೀಕ್ಷೆಯಲ್ಲಿ ಶೇ.50-60ರಷ್ಟು ಅಂಕ ಪಡೆದಿದ್ದಾನೆ ಎಂದರೆ ಅದು ಆ ವಿದ್ಯಾರ್ಥಿ, ಪೋಷಕರ ಶ್ರಮ ಎನ್ನಬಹುದು. ಆದರೆ ಏಕಾಏಕಿ ಶೇ.90ರಷ್ಟು ಫಲಿತಾಂಶ ಬಂದಿದೆ ಎಂದರೆ ಅದು ಇಡೀ ಪ್ರಕ್ರಿಯೆಯ ಮೇಲೆ ಅನುಮಾನ ತರುವುದು ಸಹಜ. ಇಂತಹ ಹತ್ತಾರು ಅಚ್ಚರಿಯ ಫಲಿತಾಂಶಗಳು ಈ ಬಾರಿಯ ಪರೀಕ್ಷೆಯಲ್ಲಿ ಉದಾಹರಣೆ ಕೊಟ್ಟು ಹೇಳಬಹುದು.

ಹಾಗಾದರೆ, ನಾಲ್ಕು ಬಾರಿ ಫೇಲಾಗಿದ್ದ ವಿದ್ಯಾರ್ಥಿ ಉತ್ತಮ ಅಂಕ ಪಡೆಯುವುದು ತಪ್ಪೇ? ಎನ್ನುವ ಪ್ರಶ್ನೆ ಬರಬಹುದು. ಶಾಲೆಯಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿ ಎಷ್ಟು ಅಂಕ ಗಳಿಸಬಹುದು ಎಂದು ವಿದ್ಯಾರ್ಥಿಗಿಂತ ಹೆಚ್ಚಾಗಿ ಆ ಶಾಲೆಯ ಶಿಕ್ಷಕರಿಗೆ, ಆಡಳಿತ ಮಂಡಳಿಗೆ ಸ್ಪಷ್ಟ ಚಿತ್ರಣವಿರುತ್ತದೆ.

ಶಿಕ್ಷಕರ ನಿರೀಕ್ಷೆಯನ್ನು ಮೀರಿ ಆ ವಿದ್ಯಾರ್ಥಿ ಉತ್ತಮ ಅಂಕ ಪಡೆದಿದ್ದರೆ ನಿಜಕ್ಕೂ ಶಹಬಾಸ್‌ಗಿರಿ ಕೊಡೋಣ. ಆದರೆ ಈ ಪ್ರಮಾಣದಲ್ಲಿ ಅಜಗಜಾಂತರ ಅಂಕಗಳು ಪರೀಕ್ಷಾ ಪ್ರಕ್ರಿಯೆಯಿಂದ ಸಿಗುವುದು ಸರಿಯಲ್ಲ ಎನ್ನುವುದಷ್ಟೇ ಎಲ್ಲರ ಕಾಳಜಿ. ಏಕೆಂದರೆ, ಗೊತ್ತಿದ್ದೋ ಗೊತ್ತಿಲ್ಲದೆಯೋ ಕರ್ನಾಟಕದ ಶಿಕ್ಷಣ ವ್ಯವಸ್ಥೆಯಲ್ಲಿ

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಪಡೆಯುವ ಅಂಕದ ಆಧಾರದಲ್ಲಿ ಪಿಯುಸಿಯಲ್ಲಿ ಯಾವ ವಿಭಾಗ ಪಡೆಯ ಬೇಕು ಎನ್ನುವುದನ್ನು ಬಹುತೇಕ ಸನ್ನಿವೇಶದಲ್ಲಿ ನಿರ್ಧಾರವಾಗುತ್ತದೆ.

ಹೀಗಿರುವಾಗ, ವಿದ್ಯಾರ್ಥಿ ಭಾರಿ ಅಂಕ ಪಡೆದ ಎನ್ನುವ ಉತ್ಸಾಹದಲ್ಲಿ ಆತನಿಗೆ ಇಷ್ಟವೇ ಇಲ್ಲದ ವಿಜ್ಞಾನ ವಿಭಾಗದಲ್ಲಿ ಪ್ರವೇಶ ಪಡೆದು ಅಲ್ಲಿ ಅನಿವಾರ್ಯವಾಗಿ ಓದಬೇಕಾದ ಸ್ಥಿತಿ ನಿರ್ಮಾಣವಾಗಬಾರದು. ಇದರೊಂದಿಗೆ ಯಾವುದೋ ಕಾರಣಕ್ಕೆ ಭಾರಿ ಅಂಕ ಪಡೆದ ವಿದ್ಯಾರ್ಥಿಯಿಂದ ಇನ್ನೊಬ್ಬ ಅರ್ಹ ವಿದ್ಯಾರ್ಥಿಗೆ ಸೀಟು ತಪ್ಪುವ ಸಾಧ್ಯತೆಯಿರುತ್ತದೆ.



ಈ ಎರಡರಲ್ಲಿ ಯಾವುದೇ ಆದರೂ ಅದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಬಹುದೊಡ್ಡ ಹೊಡೆತ ಎನ್ನುವುದು ಸತ್ಯ. 10ನೇ ತರಗತಿಯಲ್ಲಿ ಈ ಪ್ರಮಾಣದ ಫಲಿತಾಂಶ ಬಂದಿರುವುದರ ಮತ್ತೊಂದು ಸೈಡ್ ಎಫೆಕ್ಟ್ ಬಗ್ಗೆ ಸರಕಾರವಾಗಲಿ, ಸಚಿವರಾಗಲಿ ಆಲೋಚನೆ ಮಾಡಿದಂತಿಲ್ಲ.

ಅದೇನೆಂದರೆ, ಈ ಬಾರಿ ಪರೀಕ್ಷೆ ಬರೆದಿದ್ದ 7.70 ಲಕ್ಷ (ಮೊದಲ ಬಾರಿಗೆ ಬರೆದವರು) ವಿದ್ಯಾರ್ಥಿಗಳ ಪೈಕಿ 7.24 ಲಕ್ಷ ವಿದ್ಯಾರ್ಥಿಗಳು ಪಾಸಾಗಿದ್ದರೆ, 45 ಸಾವಿರ ವಿದ್ಯಾರ್ಥಿಗಳು ಫೇಲಾದರು. ಆದರೆ ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ, ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶಕ್ಕೂ ಮೊದಲು ಪ್ರಕಟವಾದ ಪಿಯುಸಿ ಫಲಿತಾಂಶದ ಅಂಕಿ-ಅಂಶ ನೋಡಬೇಕಿದೆ.

ಪಿಯುಸಿಯಲ್ಲಿ ಈ ಬಾರಿ ಸುಮಾರು 6.3 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ, ಪಾಸಾದವರ ಸಂಖ್ಯೆ 4.6 ಲಕ್ಷದ ಆಸುಪಾಸಿನಲ್ಲಿ. ಅಂದರೆ, ಕಳೆದ ವರ್ಷ ಕರ್ನಾಟಕದಲ್ಲಿ ಪಿಯುಸಿ ಕಾಲೇಜಿನಲ್ಲಿದ್ದ ಸೀಟುಗಳ ಸಂಖ್ಯೆಯೇ 6.3 ಲಕ್ಷ ಚಿಲ್ಲರೆ. ಆದರೆ ಈ ಬಾರಿ ಸುಮಾರು 7.20 ಲಕ್ಷ ಮೊದಲ ಬಾರಿಗೆ ಪರೀಕ್ಷೆ ಬರೆದ ವಿದ್ಯಾರ್ಥಿಗಳೇ ಪಾಸಾಗಿದ್ದರೆ. ಇದರೊಂದಿಗೆ ಸಿಬಿಎಸ್‌ಸಿ ಪರೀಕ್ಷೆ ಬರೆದವರು, ಒಂದು ವರ್ಷ ಫೇಲಾಗಿ ಈ ಬಾರಿ ಪಾಸಾಗಿರುವವರು, ಖಾಸಗಿಯಾಗಿ ಪರೀಕ್ಷೆ ಬರೆದ ವಿದ್ಯಾರ್ಥಿಗಳನ್ನು ಲೆಕ್ಕ ಹಾಕಿದರೆ ಸರಿಸುಮಾರು ಎಂಟು ಲಕ್ಷಕ್ಕೆ ಬಂದು ತಲುಪಲಿದೆ.

ಅಂದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಸುಮಾರು ಒಂದುವರೆ ಲಕ್ಷಕ್ಕೂ ಹೆಚ್ಚು ಪಿಯುಸಿ ಸೀಟುಗಳನ್ನು ಈ ಬಾರಿ ಹೆಚ್ಚಿಸಬೇಕಿದೆ. ಈ ಹೆಚ್ಚುವರಿ ಸೀಟುಗಳನ್ನು ಎಲ್ಲಿಂದ ಹೊಂದಾಣಿಕೆ ಮಾಡುತ್ತಾರೆ ಎನ್ನುವ ಪ್ರಶ್ನೆಗೆ ಇಲಾಖೆಯ ಬಳಿ ಉತ್ತರವಿಲ್ಲ.

ಫಲಿತಾಂಶ ಹೆಚ್ಚಾಗಿರುವಷ್ಟೇ ಪ್ರಮಾಣದಲ್ಲಿ ಪಿಯುಸಿ ಪ್ರವೇಶವನ್ನು ಹೆಚ್ಚಿಸಬೇಕಾದ ಒತ್ತಡದಲ್ಲಿ ಸರಕಾರ ಸಿಲುಕಿದೆ. ಹಾಗೆಂದು, ಸರಕಾರಿ ಪಿಯು ಕಾಲೇಜುಗಳಲ್ಲಿ ಪ್ರವೇಶ ಸಂಖ್ಯೆ ಏರಿಸುವುದಕ್ಕೆ ಉಪನ್ಯಾಸಕರ ಕೊರತೆ ಸಹಜವಾಗಿಯೇ ಕಾಡುತ್ತದೆ. ಈಗಲೇ ಅನೇಕ ಕಾಲೇಜುಗಳು ಅತಿಥಿ ಉಪನ್ಯಾಸಕರ ಮೇಲೆ ನಡೆಯುತ್ತಿದೆ.

ಹೀಗಿರುವಾಗ, ಹೆಚ್ಚುವರಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದರೆ ಯಾವ ರೀತಿಯ ಶಿಕ್ಷಣ ನೀಡಲು ಸಾಧ್ಯ? ಅದರಲ್ಲಿಯೂ ವಿಜ್ಞಾನ ವಿಭಾಗದಲ್ಲಿರುವ ಪ್ರಾಕ್ಟಿಕಲ್ ಕ್ಲಾಸ್‌ಗಳನ್ನು ಯಾವ ರೀತಿ ನಿಭಾಯಿಸುತ್ತಾರೆ ಎನ್ನುವುದಕ್ಕೆ ಉತ್ತರವಿಲ್ಲ. ಇದರಿಂದಾಗಿ ಸರಕಾರವೂ ಅನಿವಾರ್ಯವಾಗಿ ಹೆಚ್ಚುವರಿ ಪ್ರವೇಶ ಪಡೆಯುವುದಕ್ಕೆ ಖಾಸಗಿ ಕಾಲೇಜುಗಳಿಗೆ ಅನುಮತಿ ನೀಡಲೇಬೇಕಾಗುತ್ತದೆ.

ಸಹಜವಾಗಿಯೇ ಖಾಸಗಿ ಕಾಲೇಜುಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಾರೆ. ಆದರೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಏರಿಸಿದಷ್ಟೇ ಪ್ರಮಾಣದಲ್ಲಿ ಉಪನ್ಯಾಸಕರ ಸಂಖ್ಯೆ ಏರಿಸಲು ಸಾಧ್ಯವೇ? ಏಕಾಏಕಿ ಮೂರು ತಿಂಗಳಲ್ಲಿ ಅರ್ಹ ಉಪನ್ಯಾಸಕರು ಸಿಗಲು ಸಾಧ್ಯವೇ? ಎನ್ನುವ ಪ್ರಶ್ನೆಗಳಿಗೆಲ್ಲ ಉತ್ತರ ಮೌನವಾಗಿದೆ.



ಎಸ್‌ಎಸ್‌ಎಲ್‌ಸಿ ಪರೀಕ್ಷೆ ಯಾಗಲಿ, ದ್ವಿತೀಯ ಪಿಯುಸಿಯಾಗಲಿ ಪರೀಕ್ಷೆಯನ್ನು ನಡೆಸುವುದೇ ವಿದ್ಯಾರ್ಥಿಗಳನ್ನು ಪಾಸು ಮಾಡುವುದಕ್ಕೆ ಎನ್ನುವ ಅರ್ಥದಲ್ಲಿ ಶಿಕ್ಷಣ ಸಚಿವರು ಹಲವು ಬಾರಿ ಮಾತನಾಡಿರೆ. ದೇಶದಲ್ಲಿಯೇ ಮೊದಲ ಬಾರಿಗೆ ಮೂರನೇ ಪರೀಕ್ಷೆಯ ಪರಿಕಲ್ಪನೆಯನ್ನು ಜಾರಿಗೊಳಿಸಿದಾಗಲೂ, ಮಕ್ಕಳು ಫೇಲಾಗಿ ಮನೆಯಲ್ಲಿರುವುದಕ್ಕಿಂತ ಪಾಸಾಗಲು ಹೆಚ್ಚುವರಿ ಅವಕಾಶ ನೀಡುತ್ತೇವೆ ಎನ್ನುವ ಸಮರ್ಥನೆಯನ್ನು ನೀಡಿದ್ದರು.

ವಿದ್ಯಾರ್ಥಿಗಳು ಫೇಲಾಗಿ ಒಂದು ವರ್ಷ ವ್ಯರ್ಥ ಮಾಡಿಕೊಳ್ಳುವುದಕ್ಕಿಂತ ಮುಂದಿನ ಶಿಕ್ಷಣದ ದಾರಿಯಲ್ಲಿ ಸಾಗುವುದಕ್ಕೆ ಅವಕಾಶ ನೀಡುವುದು ಕೆಟ್ಟ ಆಲೋಚನೆಯಲ್ಲ. ಆದರೆ ವಿದ್ಯಾರ್ಥಿಗಳ ಜೀವನ ಎನ್ನುವ ನೆಪದಲ್ಲಿ ಪಾಸ್ ಮಾಡಿಸಲೇಬೇಕೆಂಬ ಹಠಕ್ಕೆ ಬಿದ್ದು ಪಾಸ್ ಮಾಡುವ, ಕಷ್ಟಬಿದ್ದು ಫೇಲಾಗಬೇಕು ಎನ್ನುವ ವಾತಾವರಣವನ್ನು ಸೃಷ್ಟಿಸುವುದು ಸರಿಯಲ್ಲ.

ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗೆ ಬೇಕಿರುವಷ್ಟು ಕೌಶಲ, ವಿಷಯದ ಮೇಲಿನ ಹಿಡಿತ, ಅಧ್ಯಯನವಿಲ್ಲದ ವಿದ್ಯಾರ್ಥಿಗಳನ್ನು ಸರಕಾರಿ ಪಾಸ್ ಕೊಟದಲ್ಲಿ ಮುಂದಕ್ಕೆ ತಳ್ಳುವುದರಿಂದ ವಿದ್ಯಾರ್ಥಿಗಳು ಅಂಕಪಟ್ಟಿಯಲ್ಲಿ ಪಾಸಾಗಿರುತ್ತಾನೆ ಹೊರತು, ಆತನ ಬುದ್ಧಿಮತ್ತೆಯಲ್ಲಿ ಅಲ್ಲ. ಆದ್ದರಿಂದ ಸರಕಾರ, ಇಲಾಖೆ ಹಾಗೂ ಶಿಕ್ಷಣ ಸಚಿವರು ತಮ್ಮ ಸಾಧನೆಯನ್ನು ತೋರಿಸಲು ಹೋಗಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಮಸ್ಯೆಯಾಗುವಂತಹ ತೀರ್ಮಾನಗಳತ್ತ ನೋಡುವುದು ಸರಿಯಲ್ಲ.

ಕೊನೆಯದಾಗಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರುವಂತೆ ಮಾಡುವುದು ಒಂದು ನಿರಂತರ ಪ್ರಕ್ರಿಯೆ. ಒಂದೇ ವರ್ಷದಲ್ಲಿ ಮ್ಯಾಜಿಕ್ ಮಾಡಿ ಭಾರಿ ಫಲಿತಾಂಶ ಪಡೆದರೆ, ಮುಂದಿನ ವರ್ಷವೂ ಅದೇ ಮ್ಯಾಜಿಕ್‌ನ ನಿರೀಕ್ಷೆಯಲ್ಲಿ ಮಕ್ಕಳಿರುತ್ತಾರೆ. ಇದರೊಂದಿಗೆ, ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳವಾಗಲು ವಿದ್ಯಾರ್ಥಿಗಳಿಗೆ ನೀಡಬೇಕಾದ ಹೆಚ್ಚುವರಿ ತರಬೇತಿ, ಶೈಕ್ಷಣಿಕ ನೆರವನ್ನು ನೀಡುವುದರೊಂದಿಗೆ, ಪಿಯು ಕಾಲೇಜುಗಳಲ್ಲಿನ ಮೂಲಸೌಕರ್ಯ, ವಿದ್ಯಾರ್ಥಿಗಳ ಪ್ರವೇಶ ಹೆಚ್ಚಾದರೂ ಮೌಲ್ಯ ಶಿಕ್ಷಣ ನೀಡುವುದಕ್ಕೆ ಬೇಕಾಗಿರುವ ಹೆಚ್ಚುವರಿ ಸಿಬ್ಬಂದಿ ನೇಮಕ ಸೇರಿದಂತೆ ಹತ್ತು ಹಲವು ಕ್ರಮಗಳಿಗೆ ಇಲಾಖೆ ಸಜ್ಜಾಗಬೇಕಿದೆ. ಇದಾಗದೇ ಹೋದರೆ, ಫಲಿತಾಂಶ ನೂರಕ್ಕೆ ನೂರು ಬಂದರೂ, ಒಟ್ಟಾರೆ ಶಿಕ್ಷಣ ಪದ್ಧತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ನಿರೀಕ್ಷಿಸಲು ಸಾಧ್ಯವಿಲ್ಲ.

- ರಂಜಿತ್ ಎಚ್ ಅಶ್ವತ್ಥ

ಪಠ್ಯಪುಸ್ತಕ ವಿಳಂಬ ಸಲ್ಲದು

ನೂತನ ಶೈಕ್ಷಣಿಕ ವರ್ಷದ ಆರಂಭ ಸನ್ನಿಹಿತವಾಗುತ್ತಿದೆ. ಈ ಸಂದರ್ಭದಲ್ಲಿ ರಾಜ್ಯದ ಶಾಲಾ ವಿದ್ಯಾರ್ಥಿಗಳ ಮೇಲೆ ಮತ್ತದೇ ಪಠ್ಯಪುಸ್ತಕ ವಿಳಂಬದ ಕಾರ್ಮೋಡ ಆವರಿಸಿದೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಇಲಾಖೆಯ ಭರವಸೆಗಳ ಹೊರತಾಗಿಯೂ, ಗಣನೀಯ ಪ್ರಮಾಣದ ಪಠ್ಯಪುಸ್ತಕಗಳು ಇನ್ನೂ ಮುದ್ರಣಾಲಯಗಳಲ್ಲಿಯೇ ಸಿಲುಕಿಕೊಂಡಿವೆ ಎಂಬ ವರದಿಗಳು ಕೇಳಿಬಂದಿವೆ. ಇನ್ನೂ ಕೆಲವೆಡೆ ವಿತರಣಾ ಹಂತದಲ್ಲಿ ಸವಾಲು ಎದುರಾಗಿದೆ. ವಿಶೇಷವಾಗಿ ಸರಕಾರಿ ಶಾಲೆಗಳ ಸಾವಿರಾರು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳೇ ಜ್ಞಾನದ ಏಕೈಕ ಮೂಲವಾಗಿದ್ದು, ಶಾಲೆಯ ಗಂಟೆ ಬಾರಿಸಿದರೂ ಅವರ ಕೈಯಲ್ಲಿ ಪುಸ್ತಕಗಳು ಸಿಗುವುದು ಅನುಮಾನ ಎನ್ನುವಂತಾಗಿದೆ. ಸರಕಾರಿ ಶಾಲೆಗಳಿಂದ ಮಕ್ಕಳು ವಿಮುಖರಾಗುತ್ತಿರುವ ಹೊತ್ತಲ್ಲಿ ಪಠ್ಯಪುಸ್ತಕ ವಿಳಂಬದಂಥ ಸಮಸ್ಯೆಗಳಿಂದ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆಯಷ್ಟೆ. ಅಲ್ಲದೆ, ಖಾಸಗಿ ಹಾಗೂ ಸರಕಾರಿ ಶಾಲೆಗಳ ನಡುವಿನ ಕಲಿಕೆಯ ಅಂತರವು ಕಂದಕದಂತೆ ಬೆಳೆಯುತ್ತಾ ಹೋಗುವ ಸಾಧ್ಯತೆ ಇದೆ. ಶಾಲಾ ಪುಸ್ತಕಗಳ ಜತೆಗೆ ಪಿಯು ಕಾಲೇಜು ಪಠ್ಯಪುಸ್ತಕಗಳ ಮುದ್ರಣದ ಜವಾಬ್ದಾರಿಯೂ ಈ ಬಾರಿ ಕರ್ನಾಟಕ ಪಠ್ಯಪುಸ್ತಕ ಸಂಘದ ಮೇಲೆ ಬಿದ್ದಿದೆ. ಸಂಘವು ಕಡಿಮೆ ಸಮಯದಲ್ಲಿ ಯಾವುದೇ ಲೋಪದೋಷ ಇಲ್ಲದಂತೆ ತನ್ನ ಎಲ್ಲಾ ಜವಾಬ್ದಾರಿ ನಿರ್ವಹಿಸುವುದೇ ಎನ್ನುವ ಪ್ರಶ್ನೆಯೂ ಮೂಡಿದೆ.

ಪಠ್ಯಪುಸ್ತಕಗಳನ್ನು ಸಕಾಲದಲ್ಲಿ ತಲುಪಿಸುವುದು ಕೇವಲ ಆಡಳಿತಾತ್ಮಕ ಪ್ರಕ್ರಿಯೆಯಲ್ಲ; ಇದು ಸಮಾನ ಶಿಕ್ಷಣ ವ್ಯವಸ್ಥೆಯ ಮೂಲಾಧಾರ. ಮಗುವಿನ ಪಾಲಿಗೆ ಪಠ್ಯಪುಸ್ತಕವು ಕೇವಲ ಕಾಗದದ ಕಟ್ಟಲ್ಲ. ಅದು ಇಡೀ ವರ್ಷದ ಶೈಕ್ಷಣಿಕ ನಕ್ಷೆ ಮತ್ತು ಸ್ವತಂತ್ರ ಕಲಿಕೆಯ ಸಾಧನ. ಪಠ್ಯಪುಸ್ತಕಗಳು ಇಲ್ಲದಿದ್ದಾಗ, ಶಿಕ್ಷಕ ಮತ್ತು ವಿದ್ಯಾರ್ಥಿ ನಡುವಿನ ಕಲಿಕಾ ಪ್ರಕ್ರಿಯೆಯು ಕುಂಠಿತಗೊಳ್ಳುತ್ತದೆ. ತರಗತಿಗಳು ಔಪಚಾರಿಕವಾಗಿ ನಡೆಯುತ್ತವೆ. ಇದರಿಂದ ಮಕ್ಕಳ ಮೇಲಾಗುವ ಮಾನಸಿಕ ಪರಿಣಾಮವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಅಗತ್ಯ ಪರಿಕರಗಳಿಲ್ಲದೆ ಕಲಿಕೆ ಪ್ರಾರಂಭಿಸುವುದು ಮಕ್ಕಳಲ್ಲಿ ಶಾಲಾ ಶಿಕ್ಷಣ ಕುರಿತು ಅಲಕ್ಷ್ಯದ ಭಾವನೆಯನ್ನು ಮೂಡಿಸುತ್ತದೆ.

ರಾಜ್ಯ ಸರಕಾರವು ಈ ವಿಳಂಬವನ್ನು ಸಹಿಸಿಕೊಳ್ಳಬಾರದು. ನಮ್ಮ ವಿದ್ಯಾರ್ಥಿಗಳು ಸರಕಾರದ ವೈಫಲ್ಯದಿಂದಾಗಿ ಕುಂಟುತ್ತಾ ಸಾಗುವಂತಾಗಬಾರದು. ಪಠ್ಯಪುಸ್ತಕ ವಿಳಂಬವು ಕೇವಲ ಆಡಳಿತಾತ್ಮಕ ವೈಫಲ್ಯವಲ್ಲ. ಇದು ಶಿಕ್ಷಣ ಕ್ಷೇತ್ರದ ಕುರಿತ ಅಸಡ್ಡೆಯೂ ಹೌದು. ಇಲಾಖೆಯು ಅಧಿಕಾರಶಾಹಿ ವಿಳಂಬವನ್ನು ಬದಿಗಿಟ್ಟು ಟೆಂಡರ್ ಪ್ರಕ್ರಿಯೆಯನ್ನು ಸುಗಮಗೊಳಿಸಬೇಕು ಮತ್ತು ವಿಳಂಬಕ್ಕೆ ತೊಡಕಾಗುವವರನ್ನು ಗುರುತಿಸಿ ಹೊಣೆಗಾರರನ್ನಾಗಿ ಮಾಡಬೇಕು. ಪ್ರತಿಯೊಂದು ಮಗುವಿನ ಕೈಗೆ ಪುಸ್ತಕ ತಲುಪಿಸುವುದು ಸರಕಾರದ ಹೊಣೆಗಾರಿಕೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕು. ಮಕ್ಕಳ ಭವಿಷ್ಯವು ಮುದ್ರಣಾಲಯಗಳಿಂದ, ಆಡಳಿತಾತ್ಮಕ ಬೇಜವಾಬ್ದಾರಿತನದಿಂದ ಕುಂಠಿತಗೊಳ್ಳುವಂತಾಗಬಾರದು. ಈ ಸಮಸ್ಯೆ ಶೀಘ್ರ ಪರಿಹಾರಗೊಳ್ಳಲಿ. ಮಕ್ಕಳ ಭವಿಷ್ಯದ ಜತೆ ಆಟ ಬೇಡ.

- ಕೆ.ಪಿ.ಅಶ್ವಿನ್ ರಾವ್

ಯಾವ ಬಾಟಲ್‌ನಲ್ಲಿ ನೀರು ಕುಡಿಯುವುದು ಉತ್ತಮ?

ಈಗ ಬಿರು ಬೇಸಿಗೆಯ ಸಮಯ. ಎಲ್ಲರಿಗೂ ನೀರಿನ ಅಗತ್ಯ ತುಂಬಾ ಇದೆ. ಕುಡಿಯಲು ಉಪಯೋಗಿಸುವ ನೀರು ಶುದ್ಧವಾಗಿದ್ದು, ಕ್ರಿಮಿಕೀಟಗಳಿಂದ ಮುಕ್ತವಾಗಿರಬೇಕು. ಮನೆಯಿಂದ ಹೊರಗೆ ಹೋಗುವಾಗ ನೀರನ್ನು ತೆಗೆದುಕೊಂಡು ಹೋಗಲು ನಾವು ಹಲವು ಬಾರಿ ಯಾವುದೋ ತಂಪು ಪಾನೀಯಗಳ ಪ್ಲಾಸ್ಟಿಕ್ ಬಾಟಲಿ, ಹಳೆಯ ನೀರಿನ ಫ್ಲಾಸ್ಕ್‌ಗಳು, ಹಳೆಯ ತಾಮ್ರದ ಬಾಟಲಿಗಳನ್ನು ಉಪಯೋಗಿಸುತ್ತೇವೆ. ಇವೆಲ್ಲಾ ಬಹಳ ಅಪಾಯಕಾರಿ.

ಶಾಲೆಗೆ ಹೋಗುವ ಮಕ್ಕಳು, ಆಫೀಸ್‌ಗೆ ಹೋಗುವ ಜನರು, ಹೊಲಗಳಿಗೆ ಹೋಗುವ ರೈತರು ಯಾರೇ ಆಗಲಿ ಜೊತೆಯಲ್ಲಿ ಒಂದು ನೀರಿನ ಬಾಟಲಿ ಹಿಡಿದುಕೊಂಡು ಹೋಗುವುದು ಸಾಮಾನ್ಯ. ಇವರೆಲ್ಲ ಯಾವ ಬಾಟಲಿಯಲ್ಲಿ ನೀರು ಕುಡಿಯುತ್ತಾರೆ ಎನ್ನುವುದು ಮುಖ್ಯ. ಏಕೆಂದರೆ ಕೆಲವೊಂದು ಬಾಟಲಿಗಳಲ್ಲಿ ಸಂಗ್ರಹಿಸಲಾದ ನೀರು ಕುಡಿಯಲು ಒಳ್ಳೆಯದಲ್ಲ, ಸ್ಟೀಲ್ ಅಥವಾ ಉಕ್ಕಿನ ಬಾಟಲಿನಲ್ಲಿ ನೀರು ಚೆನ್ನಾಗಿ ಹೆಚ್ಚು ಸಮಯ ಬಾಳಿಕೆ ಬರುತ್ತವೆ. ಇದರಲ್ಲಿ ನೀರು ಕುಡಿಯಲು ಯೋಗ್ಯವಾಗಿರುತ್ತದೆ. ದೀರ್ಘಕಾಲದವರೆಗೆ ನೀರನ್ನು ಬಿಸಿ ಹಾಗೂ ತಂಪಾಗಿ ಇಡುತ್ತದೆ. ಈ ಬಾಟಲಿಯನ್ನು ಗಾಜಿನ ಬಾಟಲಿಯಂತೆ ಸ್ವಚ್ಛ ಮಾಡುವುದು ಕಷ್ಟವಾಗಿದೆ. ಇವುಗಳನ್ನು ನಿಯಮಿತವಾಗಿ ಸ್ವಚ್ಛ ಮಾಡದಿದ್ದರೆ ನೀರಿಗೆ ಲೋಹದ ರುಚಿ, ವಾಸನೆ ಬರುತ್ತದೆ. ನಿತ್ಯದ ಬಳಕೆಗೆ ಉತ್ತಮ ಸ್ಟೀಲ್ ಬಾಟಲಿ ಎನ್ನಲಾಗಿದೆ.

ಪ್ಲಾಸ್ಟಿಕ್ ಬಾಟಲಿಯಲ್ಲಿ ನೀರು ಕುಡಿಯುವುದರಿಂದ ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ. ಏಕೆಂದರೆ ಪ್ಲಾಸ್ಟಿಕ್‌ನಲ್ಲಿ ಬೆರೆತಿರುವ ರಾಸಾಯನಿಕಗಳು ನೀರಿನೊಂದಿಗೆ ಬೆರೆಯುವ ಸಾಧ್ಯತೆ ಇದೆ. ಇದು ದೇಹವನ್ನು ಪ್ರವೇಶಿಸಿ ರಕ್ತದ ಸಂಚಲನದಲ್ಲಿ ಬೆರೆತು ನಮ್ಮ ಅಂಗಾಂಗಗಳನ್ನು ತಲುಪುತ್ತದೆ. ಇದು ಕ್ಯಾನ್ಸರ್, ಹೃದಯ ಸಮಸ್ಯೆಗಳನ್ನು ಹೆಚ್ಚಿಸುತ್ತದೆ. ಪ್ಲಾಸ್ಟಿಕ್ ಬಾಟಲಿಗಳಲ್ಲಿ ಬ್ಯಾಕ್ಟೀರಿಯಾಗಳು ಸಂತಾನೋತ್ಪತ್ತಿ ಉಲ್ಬಣಗೊಳ್ಳುವುದು ಅಧಿಕ. ಹೀಗಾಗಿ ಈ ಇದನ್ನು ಬಳಸುವುದು ಮಾರಕವಾಗಿದೆ.

ತಾಮ್ರದ ಬಾಟಲಿಯಲ್ಲಿ ಸಂಗ್ರಹಿಸಿದ ನೀರು ಕುಡಿಯುವುದರಿಂದ ಆರೋಗ್ಯ ವೃದ್ಧಿಸುತ್ತವೆ. ತಾಮ್ರ ಬ್ಯಾಕ್ಟೀರಿಯಾಗಳನ್ನು ಕೊಲ್ಲುತ್ತದೆ. ಜೊತೆಗೆ ದೇಹದಲ್ಲಿ ಜೀರ್ಣಕ್ರಿಯೆ ಚೆನ್ನಾಗಿ ಮಾಡುತ್ತದೆ. ಇದರಿಂದ ಅನೇಕ ಆಯುರ್ವೇದ ಪ್ರಯೋಜನಗಳು ಇವೆ. ಆದರೆ ದೀರ್ಘಕಾಲದವರೆಗೆ ನೀರನ್ನು ಈ ಬಾಟಲಿಯಲ್ಲಿ ಇಟ್ಟರೆ ತಾಮ್ರ ವಿಷವಾಗುತ್ತದೆ. ಯಕೃತ್ತು, ಮೂತ್ರಪಿಂಡದ ಸಮಸ್ಯೆ ಹೆಚ್ಚಾಗುತ್ತದೆ.

ಗಾಜಿನ ಬಾಟಲಿಯಲ್ಲಿ ಯಾವುದೇ ರಾಸಾಯನಿಕ ಸೋರಿಕೆಯಾಗದ ಕಾರಣ ನೀರು ಬಹಳ ಸಮಯ ಕುಡಿಯಲು ಯೋಗ್ಯವಾಗಿಯೇ ಇರುತ್ತದೆ, ಅದೇ ರುಚಿ ಇರುತ್ತದೆ. ಬ್ಯಾಕ್ಟೀರಿಯಾಗಳ ತೊಂದರೆ ಇರಲ್ಲ, ಸುಲಭವಾಗಿ ಸ್ವಚ್ಛ ಮಾಡಬಹುದು. ಇದು ಬಿಪಿಎ ಮುಕ್ತವಾಗಿದೆ. ಆರೋಗ್ಯಕ್ಕೆ ಹಾಗೂ ಪರಿಸರಕ್ಕೂ ಈ ಬಾಟಲ್‌ಗಳು ಉತ್ತಮ, ಇವುಗಳಿಂದ ಯಾವುದೇ ಸಮಸ್ಯೆ ಇಲ್ಲ. ಆದರೆ ಕೈ ಜಾರಿ ಕೆಳಗೆ ಬಿದ್ದರೆ ಬಾಟಲಿ ಒಡೆದು ಹೋಗುತ್ತದೆ. ಇದು ಗಾಜಿನ ಬಾಟಲಿಯ ಸಮಸ್ಯೆ. ಉಳಿದಂತೆ ಸ್ವಲ್ಪ ಜಾಗರೂಕತೆಯಿಂದ ಉಪಯೋಗಿಸಿದರೆ ಗಾಜಿನ ಬಾಟಲಿಯ ನೀರು ಅಮೃತವೆಂದೇ ಹೇಳಬಹುದು.

ಬತ್ತದ ಪಾಯಸದ ಮಡಿಕೆ ಮತ್ತು ಆಧುನಿಕ ತಂತ್ರಜ್ಞಾನದ ಸವಾಲು

ಬಹಳ ಹಿಂದೆ, ಕಾಯಕವನ್ನೇ ನಂಬಿದ ಒಬ್ಬ ಬಡ ಮಹಿಳೆ ತನ್ನ ಏಕೈಕ ಮಗಳೊಂದಿಗೆ ವಾಸಿಸುತ್ತಿದ್ದಳು. ಅವರ ಬದುಕು ಬಲು ಕಷ್ಟದ್ದಾಗಿತ್ತು. ತುತ್ತು ಅನ್ನಕ್ಕೂ ಪರದಾಡುವ ಸ್ಥಿತಿ, ಅದರಲ್ಲೂ ಕೊರೆಯುವ ಚಳಿಗಾಲದ ದಿನಗಳನ್ನು ಕಳೆಯುವುದು ಅವರಿಗೆ ದೊಡ್ಡ ಸವಾಲಾಗಿತ್ತು. ಒಂದು ಮಧ್ಯಾಹ್ನ, ಕಾಡಿನ ದಟ್ಟ ಹಸಿರಿನ ನಡುವೆ ಧಾನ್ಯಗಳನ್ನು ಹುಡುಕುತ್ತಾ ಹೊರಟಿದ್ದ ಆಕೆಗೆ, ತೊರೆಯ ದಡದಲ್ಲಿ ಕುಳಿತಿದ್ದ ಒಬ್ಬ ವೃದ್ಧೆ ಎದುರಾದಳು. ಮಹಿಳೆಯ ಮುಗ್ಧತೆ ಮತ್ತು ದಯಾಗುಣವನ್ನು ಮೆಚ್ಚಿದ ಆ ವೃದ್ಧೆ, ಹಣವನ್ನೇನೂ ಕೇಳದೆ, ಕೇವಲ ಚಳಿಯಿಂದ ರಕ್ಷಿಸಿಕೊಳ್ಳಲು ಸ್ವಲ್ಪ ಆಶ್ರಯ ಬೇಡಿದಳು. ತನ್ನಲ್ಲಿ ಏನೂ ಇಲ್ಲದಿದ್ದರೂ ಆ ಮಹಿಳೆ ತನ್ನ ಉಣ್ಣೆಯ ಶಾಲನ್ನು ಆಕೆಗೆ ಹೊದಿಸಿ, ಪ್ರೀತಿಯಿಂದ ಮನೆಗೆ ಕರೆತಂದಳು.

ಆಕೆಯ ಉಪಕಾರಕ್ಕೆ ಪ್ರತಿಯಾಗಿ ವೃದ್ಧೆಯು ತನ್ನ ಚೀಲದಿಂದ ಒಂದು ಪುಟ್ಟ ಕಬ್ಬಿಣದ ಮಡಿಕೆಯನ್ನು ತೆಗೆದು ಕೊಡುತ್ತಾ ಒಂದು ರಹಸ್ಯವನ್ನು ಪಿಸುಗುಟ್ಟಿದಳು: ನಿನಗೆ ಹಸಿವಾದಾಗ ಪುಟ್ಟ ಮಡಿಕೆಯೇ, ಅಡುಗೆ ಮಾಡು ಎಂದರೆ ಸಾಕು, ಅದು ಸವಿಯಾದ ಪಾಯಸವನ್ನು ನೀಡುತ್ತದೆ. ಸಾಕೆನಿಸಿದಾಗ ಪುಟ್ಟ ಮಡಿಕೆಯೇ, ನಿಲ್ಲಿಸು ಎಂದರೆ ಸಾಕು, ಅದು ತಕ್ಷಣ ನಿಲ್ಲುತ್ತದೆ.

ಮೊದಮೊದಲು ಇದನ್ನು ನಂಬದಿದ್ದರೂ, ಅಂದು ಸಂಜೆ ಆಕೆ ಮಡಿಕೆಗೆ ಆಜ್ಞೆ ಮಾಡಿದಾಗ ಆಶ್ಚರ್ಯವೊಂದು ಕಾದಿತ್ತು! ಮಡಕೆಯಿಂದ ಘಮಘಮಿಸುವ ಹೊಂಬಣ್ಣದ ಪಾಯಸ ನೊರೆನೊರೆಯಾಗಿ ಉಕ್ಕಿ ಬರತೊಡಗಿತು. ಅಂದಿನಿಂದ ಆ ತಾಯಿ-ಮಗಳ ಜೀವನದಲ್ಲಿ ಹಸಿವಿನ ನೋವೇ ಮಾಯವಾಯಿತು.

ಆದರೆ, ಯಾವುದೇ ಶಕ್ತಿಯುತ ಉಡುಗೊರೆಯು ಅದನ್ನು ಬಳಸುವವರ ಸಂಯಮವನ್ನು ಪರೀಕ್ಷಿಸುತ್ತದೆ. ಒಂದು ದಿನ ತಾಯಿ ಮಾರುಕಟ್ಟೆಗೆ ಹೋದಾಗ, ಮಗಳಿಗೆ ಹಠಾತ್ ಹಸಿವಾಯಿತು. ಅವಳು ಮಡಿಕೆಗೆ ಆಜ್ಞೆ ನೀಡಿ ಹೊಟ್ಟೆತುಂಬ ಉಂಡಳು. ಆದರೆ ಆಟದ ಭರದಲ್ಲಿ ಅದನ್ನು ನಿಲ್ಲಿಸುವ ಮಂತ್ರವನ್ನೇ ಮರೆತುಬಿಟ್ಟಳು! ತಡೆಯಿಲ್ಲದ ಯಾಂತ್ರಿಕ ವೇಗದಂತೆ ಮಡಕೆ ಪಾಯಸವನ್ನು ಹೊರಹಾಕುತ್ತಲೇ ಇತ್ತು. ಅಡುಗೆ ಮನೆ ತುಂಬಿ, ಮನೆಯ ಹೊಸ್ತಿಲು ದಾಟಿ, ಪಾಯಸದ ನದಿಯೇ ಹಳ್ಳಿಯ ಬೀದಿಗೆ ನುಗ್ಗಿತು.

ಮಧ್ಯಾಹ್ನವಾಗುವಷ್ಟರಲ್ಲಿ ಇಡೀ ಹಳ್ಳಿಯೇ ಪಾಯಸದ ಮಡುವಿನಲ್ಲಿ ಮುಳುಗಿತ್ತು. ಗ್ರಾಮಸ್ಥರು ಮನೆಗಳ ಮಾಳಿಗೆ ಏರಿ ಜೀವ ಉಳಿಸಿಕೊಳ್ಳಬೇಕಾಯಿತು. ಕೊನೆಗೆ ತಾಯಿ ಓಡಿಬಂದು ಪುಟ್ಟ ಮಡಿಕೆಯೇ, ನಿಲ್ಲಿಸು! ಎಂದು ಆಜ್ಞಾಪಿಸಿದಾಗಷ್ಟೇ ಆ ಪ್ರವಾಹ ನಿಂತಿತು. ಆ ಮಡಕೆಯ ಅತಿರೇಕದ ಉತ್ಪಾದನೆಯನ್ನು ಸ್ವಚ್ಛಗೊಳಿಸಲು ಗ್ರಾಮಸ್ಥರಿಗೆ ಒಂದು ತಿಂಗಳೇ ಬೇಕಾಯಿತು!

ಕಥೆಯ ಒಳಾರ್ಥ: ಆಧುನಿಕ ಎಐ ಯುಗಕ್ಕೆ ಒಂದು ಎಚ್ಚರಿಕೆ

ಈ ಜಾನಪದ ಕಥೆಯು ಇಂದಿನ ಜನರೇಟಿವ್ ಎಐ ಲೋಕಕ್ಕೆ ಒಂದು ಕನ್ನಡಿಯಂತಿದೆ. ಇಲ್ಲಿನ ಅಲ್ಗಾರಿದಮ್‌ಗಳು ಆ ಮಾಂತ್ರಿಕ ಮಡಕೆಯಂತೆ; ಅವುಗಳಿಗೆ ಮಿತಿಯಿಲ್ಲದಷ್ಟು ಮಾಹಿತಿ, ಡೇಟಾ ಮತ್ತು ಕೋಡ್‌ಗಳನ್ನು ಸೃಷ್ಟಿಸುವ ಸಾಮರ್ಥ್ಯವಿದೆ. ಆದರೆ ಆ ಪುಟ್ಟ ಮಗಳು ಮಡಕೆಯನ್ನು ನಿಯಂತ್ರಿಸಲು ಕಷ್ಟಪಟ್ಟಂತೆ, ಇಂದು ಸಮಾಜವು ಎಐ ವ್ಯವಸ್ಥೆಗಳನ್ನು ನಿರ್ವಹಿಸುವ ಸವಾಲನ್ನು ಎದುರಿಸುತ್ತಿದೆ.

ಮಾನವ ನಿಯಂತ್ರಣದ ಅಗತ್ಯ: ಎಐ ವ್ಯವಸ್ಥೆಗಳು ಕೇವಲ ಔಟ್‌ಪುಟ್ ನೀಡುವುದರ ಮೇಲೆ ಗಮನ ಹರಿಸುತ್ತವೆ. ಆದರೆ ಮನುಷ್ಯನಿಗೆ ಅಗತ್ಯವಿರುವ ನೈತಿಕ ಚೌಕಟ್ಟು ಮತ್ತು ವಿವೇಚನೆ ಅದಕ್ಕಿರುವುದಿಲ್ಲ.

ಆಫ್ ಸ್ವಿಚ್ ಇಲ್ಲದ ಅಪಾಯ: ಸರಿಯಾದ ಮೇಲ್ವಿಚಾರಣೆ ಅಥವಾ ನಿಯಂತ್ರಣದ ಆಫ್ ಸ್ವಿಚ್ ಇಲ್ಲದಿದ್ದರೆ, ನಮ್ಮ ಸಮಸ್ಯೆಗಳನ್ನು ಪರಿಹರಿಸಲು ನಾವು ಸೃಷ್ಟಿಸಿದ ಈ ಅದ್ಭುತ ತಂತ್ರಜ್ಞಾನವೇ ನಮ್ಮನ್ನು ಅನಿರೀಕ್ಷಿತ ದುಷ್ಪರಿಣಾಮಗಳ ಪ್ರವಾಹದಲ್ಲಿ ಮುಳುಗಿಸಿಬಿಡ ಬಹುದು.

- ಹರಿ ಪ್ರಸಾದ್

2026ರ ಎಸ್ ಎಸ್ ಎಲ್ ಸಿ ಸಾಧನೆ

ಕರ್ನಾಟಕ ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2026ರ ಮಾರ್ಚ್- ಏಪ್ರಿಲ್ ಮಾಹೆಗಳಲ್ಲಿ ನಡೆಸಿದ ಎಸ್. ಎಸ್ ಎಲ್.ಸಿ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಿ ವಾರವೇ ಸಂದಿದೆ. ನಿಗದಿತ ದಿನಕ್ಕೆ ಮುಂಚಿತವಾಗಿಯೇ ಫಲಿತಾಂಶ ಬಿಡುಗಡೆಯಾಗಿದೆ. ರೇಂಕ್ ನಿರ್ಣಯಕ್ಕೆ ಹಿಂದಿ ಮತ್ತು ಸಂಸ್ಕೃತ ಬೇಕು ಬೇಡ ಎಂಬ ಗೊಂದಲದ ನಡುವೆಯೂ ನ್ಯಾಯಾಲಯದ ಆದೇಶದಂತೆ ತೃತೀಯ ಭಾಷೆಗೆ ನ್ಯಾಯ ಸಿಕ್ಕಿದೆ. ಫಲಿತಾಂಶದಲ್ಲಿ ಹಿಂದಿಗೆ ಮನ್ನಣೆ ಸಿಕ್ಕಿ ಅದು ಗೆದ್ದು ಬೀಗಿದೆ; ಸಂಸ್ಕೃತಕ್ಕೂ ಅವಕಾಶ ತಪ್ಪಿಹೋಗಲಿಲ್ಲ. ರಾಜ್ಯದ ಫಲಿತಾಂಶ ಈ ಬಾರಿ ದಾಖಲೆಯೆಂಬುದು ವಿಶೇಷ. ಈ ಏರಿಕೆಯಲ್ಲಿ ಆಂತರಿಕ ಮೌಲ್ಯಮಾಪನದಲ್ಲಿ ನೀಡಲಾದ ಧಾರಾಳ ಅಂಕಗಳು ಅಲ್ಪ ಮಟ್ಟದಲ್ಲಿ ನೆರವಾಗಿರಲೂ ಬಹುದು.

ಕರ್ನಾಟಕ ರಾಜ್ಯದ ಫಲಿತಾಂಶ 94.1%. ಕಳೆದ ಬಾರಿಗಿಂತ ಬರೋಬ್ಬರಿ ಶೇಕಡಾ 14 ರಷ್ಟು ನೆಗೆತ ಕಂಡ ಫಲಿತಾಂಶ. ಜಿಲ್ಲಾವಾರು ತಾಳೆ ಹಾಕಿದಾಗ ದಕ್ಷಿಣ ಕನ್ನಡ ಶೇಕಡಾ 98.4 ಫಲಿತಾಂಶ ಪಡೆದು ಮಾಮೂಲಿನಂತೆ ಮೊದಲ ಸ್ಥಾನಿ. ದಕ್ಷಿಣ ಕನ್ನಡದ ಪಕ್ಕದಲ್ಲೇ ಇರುವ ಉಡುಪಿ ಜಿಲ್ಲೆಯು ಪಿ.ಯೂ ಮತ್ತು ಎಸ್.ಎಸ್.ಎಲ್.ಸಿ ಫಲಿತಾಂಶಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನಗಳಿಗಾಗಿ ಪೈಪೋಟಿಯಲ್ಲಿರುತ್ತವೆ. ಈ ಬಾರಿ ಎಸ್.ಎಸ್.ಎಲ್.ಸಿ ಯಲ್ಲಿ ಶೇಕಡಾ 98.18 ಫಲಿತಾಂಶ ಪಡೆದು ಅತ್ಯಲ್ಪ ಅಂತರದಲ್ಲಿ ಉಡುಪಿ ದ್ವಿತೀಯ ಸ್ಥಾನ ಪಡೆಯಿತು. ಉತ್ತರಕನ್ನಡ ಜಿಲ್ಲೆ ಶೇಕಡಾ 98.09 ಫಲಿತಾಂಶ ನೀಡಿ ತೃತೀಯ ಸ್ಥಾನ ಅಲಂಕರಿಸಿತು.

ಈ ಸಲ ಬಂಟ್ವಾಳ ತಾಲೂಕು 97.87% ಫಲಿತಾಂಶ ಪಡೆದಿದೆ. 96 ಪ್ರೌಢ ಶಾಲೆಗಳ ಪೈಕಿ 16 ಸರಕಾರಿ, 7 ಅನುದಾನಿತ ಮತ್ತು 32 ಅನುದಾನರಹಿತ ಒಟ್ಟು 55 ಪ್ರೌಢ ಶಾಲೆಗಳು ಶೇಕಡಾ 100% ಫಲಿತಾಂಶ ನೀಡಿರುವುದು ಗ್ರಾಮಾಂತರ ಶಾಲೆಗಳು ಕಲಿಕಾ ಮಟ್ಟ ಕಾಯ್ದುಕೊಳ್ಳುವಲ್ಲಿ ಶ್ರಮಿಸುತ್ತಿವೆ ಎಂಬುದನ್ನು ಮತ್ತೊಮ್ಮೆ ರುಜುವಾತು ಮಾಡಿವೆ.

ರಾಜ್ಯದಲ್ಲಿ ಕಳೆದ ಬಾರಿ 22ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದರೆ ಈ ಬಾರಿ ಏಳು ಮಂದಿಗೆ ಈ ಭಾಗ್ಯ ಬಂದಿದೆ. ಅವರಲ್ಲಿ ಮೂವರು ಬಾಲಕಿಯರು ಮತ್ತು ನಾಲ್ವರು ಬಾಲಕರು ಎಂಬುದೇ ವಿಶೇಷ. ರಾಜ್ಯದ ಒಟ್ಟು ಫಲಿತಾಂಶವನ್ನು ಬಾಲಕ ಬಾಲಕಿಯರೆಂದು ವಿಂಗಡಿಸುವುದಾದರೆ ಹುಡುಗಿಯರು ಶೇಕಡಾ 96.1 ಮತ್ತು ಹುಡುಗರು ಶೇಕಡಾ 91.94 ಫಲಿತಾಂಶ ನೀಡಿದ್ದಾರೆ. ಹುಡುಗಿಯರ ಕೈ ಮೇಲಾಗಿರುವುದು ಅವರ ಕಲಿಕಾ ಶ್ರಮವನ್ನು ಎತ್ತಿ ಹಿಡಿಯುತ್ತದೆ.

ಬಂಟ್ವಾಳ ತಾಲೂಕಿನ ಮಾಣಿ ಬಾಲ ವಿಕಾಸ ಆಂಗ್ಲ ಮಾಧ್ಯಮ ಶಾಲೆಯ ಕುಮಾರಿ ಪೂರ್ವಿ 620 ಅಂಕ ಪಡೆದು ತಾಲೂಕಿಗೆ ಮೊದಲಿಗಳಾಗಿರುವಳು. ವಿಟ್ಲ ಕಸಬ ಗ್ರಾಮದ ಕಲ್ಲಕಟ್ಟ ನಿವಾಸಿ, ಟೈಲರ್ ವೃತ್ತಿಯ ಕೆ. ಜಗನ್ನಾಥ ಶೆಟ್ಟಿ ಸಾರಿಕಾ ಶೆಟ್ಟಿ ದಂಪತಿಗಳ ಪುತ್ರಿ, ಕುಮಾರಿ ಬಾಂಧವಿ 625ಕ್ಕೆ 606 ಅಂಕ ಗಳಿಸಿ ಕನ್ನಡ ಮಾಧ್ಯಮದಲ್ಲಿ ಉತ್ತಮ ಸಾಧನೆ ಮಾಡಿರುತ್ತಾಳೆ.

ಸಂಸ್ಕೃತ ಭಾಷೆಯಲ್ಲಿ ನೂರಕ್ಕೆ ನೂರರ ಈಕೆಯ ಸಾಧನೆ ಪ್ರಶಂಸನೀಯ. ಸ್ಕೌಟ್ ಚಟುವಟಿಕೆಯಲ್ಲಿ ತೃತೀಯ ಸೋಪಾನ ಮುಗಿಸಿ, ರಾಜ್ಯ ಪುರಸ್ಕಾರ ಪಡೆಯಲು ಕಾತರಳಾಗಿರುವ ಬಾಂಧವಿಯು ವಿಠಲ ಪ್ರೌಢ ಶಾಲೆಯ ವಿದ್ಯಾರ್ಥಿನಿ. ಆ ಪ್ರೌಢ ಶಾಲೆಗೆ ಬಾಂಧವಿಯೇ ಮೊದಲಿಗಳಾಗಿರುವಳು. ಬಾಂಧವಿ ಬಿ.ಪಿ.ಎಲ್ ಕುಟುಂಬದ ಮಗಳು. ಬಡತನವು ಕಲಿಕೆಗೆ ಅಡ್ಡಿಯಲ್ಲ, ಕಲಿಯುವವರು ಎಲ್ಲಿಯೂ ಕಲಿಯುತ್ತಾರೆ. ಕಲಿಯುವ ಆಸಕ್ತಿ ಮತ್ತು ಪರಿಶ್ರಮ ಬೇಕು ಎಂದೆನ್ನುವ ಈಕೆ ಹೆತ್ತವರು ನೀಡಿದ ಸಹಕಾರ ಹಾಗೂ ಬೋಧಕರ ಪ್ರೋತ್ಸಾಹಗಳನ್ನು ಸ್ಮರಿಸುತ್ತಾಳೆ. ತಾನು ನೃತ್ಯಾಭ್ಯಾಸಿಯಾಗಿದ್ದು ತನಗೆ ತಿಳಿದಿರುವ ನೃತ್ಯಗಳನ್ನು ಅಕ್ಕ ಪಕ್ಕದ ಬಾಲಕಿಯರಿಗೆ ಹೇಳಿ ಕೊಡಲು ಉತ್ಸುಕ ಮನಸ್ಸು ಹೊಂದಿರುವುದು ಈಕೆಯ ಮನೋವೈಶಾಲ್ಯಕ್ಕೆ ನಿದರ್ಶನ. ಸದಾ ಚಟುವಟಿಕೆ ಮತ್ತು ಕ್ರಿಯಾಶೀಲತೆಯೇ ಇವಳ ಯಶದ ಗುಟ್ಟು.

ವಿಠಲ ಪ್ರೌಢ ಶಾಲೆಯ ಪ್ರಾಂಶುಪಾಲರಾದ ಕಿರಣ್ ಕುಮಾರ್‌ರವರು ಹೇಳುವಂತೆ , ಅತ್ಯುತ್ತಮ semi classical dancer, folk dancer, ಕುಣಿತ ಭಜನೆಗಾರ್ತಿ, ಉತ್ತಮ ವ್ಯಕ್ತಿತ್ವದ ಪ್ರತಿಭಾವಂತ ವಿದ್ಯಾರ್ಥಿನಿ ಬಾಂಧವಿ. ಬಾಂಧವಿಯು ರೆಡ್ ಕ್ರಾಸ್ ಸಂಸ್ಥೆ ರಾಜ್ಯ ಮಟ್ಟದಲ್ಲಿ ನಡೆಸಿದ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯೊಂದಿಗೆ ಉತ್ತೀರ್ಣಳಾಗಿರುತ್ತಾಳೆ. ಜಿಲ್ಲಾ ಹಂತದ ಪ್ರತಿಭಾ ಕಾರಂಜಿಯಲ್ಲಿ ಜಾನಪದ ನೃತ್ಯದಲ್ಲಿ ಭಾಗವಹಿಸಿದ್ದಾಳೆ. ಬಾಂಧವಿ ಮಗಳ, ಮುಂದಿನ ಶಿಕ್ಷಣ ಸುಗಮವಾಗಲಿ ಎಂಬ ಹಾರೈಕೆಯೊಂದಿಗೆ ಎಸ್. ಎಸ್. ಎಲ್. ಸಿ. 2026ರ ಎಲ್ಲ ಸಾಧಕರಿಗೆ ಶುಭಾಶಯ ಹೇಳೋಣ.

- ರಮೇಶ ಎಂ. ಬಾಯಾರು, ಬಂಟ್ವಾಳ

ವಿನಯ್ ಕುಲಕರ್ಣಿ ಅರ್ಜಿ: ಸಿಬಿಐಗೆ ಕೋರ್ಟ್ ನೋಟೀಸ್

ಜೀವಾವಧಿ ಶಿಕ್ಷೆ ರದ್ದು ಕೋರಿ ಹೈಕೋರ್ಟ್‌ಗೆ ಮನವಿ | ಮೆರಿಟ್ ಆಧಾರದ ಮೇಲೆ ವಿಚಾರಣೆ ನಡೆಸುವುದಿಲ್ಲ

• ಪ್ರಜೋದಯ ವರದಿ

ಬೆಂಗಳೂರು: ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ತಮಗೆ ವಿಧಿಸಿರುವ ಜೀವಾವಧಿ ಶಿಕ್ಷೆ ರದ್ದು ಕೋರಿ ಕಾಂಗ್ರೆಸ್ ಮುಖಂಡ ವಿನಯ್ ಕುಲಕರ್ಣಿ ಹೈಕೋರ್ಟ್‌ಗೆ ಮನವಿ ಸಲ್ಲಿಸಿದ ಹಿನ್ನಲೆಯಲ್ಲಿ ಕೋರ್ಟ್ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ನೋಟೀಸ್ ಜಾರಿ ಮಾಡಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಜೀವಾವಧಿ ಶಿಕ್ಷೆ ರದ್ದು ಮಾಡುವಂತೆ ಕೋರಿ ವಿನಯ್ ಕುಲಕರ್ಣಿ ಮತ್ತು ಚಂದ್ರಶೇಖರ್ ಸಲ್ಲಿಸಿರುವ ಮೇಲ್ಮನವಿಗಳನ್ನು ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್ ಮತ್ತು ಟಿ.ವೆಂಕಟೇಶ್ ನಾಯಕ್ ಅವರ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ವಿನಯ್ ಕುಲಕರ್ಣಿ ಪರವಾಗಿ ಹಿರಿಯ ವಕೀಲ ಸಿ.ವಿ.ನಾಗೇಶ್ ಮತ್ತು ಚಂದ್ರಶೇಖರ್ ಇಂಡಿ ಪರವಾಗಿ ಎಸ್.ನಾಗಮುತ್ತು ಹಾಜರಾಗಿ ವಾದ ಮಂಡಿಸಿದರು.

- ಜೀವಾವಧಿ ಶಿಕ್ಷೆಯನ್ನು ರದ್ದುಗೊಳಿಸುವಂತೆ ಕೋರಿ ಕಾಂಗ್ರೆಸ್ ಮುಖಂಡ ವಿನಯ್ ಕುಲಕರ್ಣಿ ಹೈಕೋರ್ಟ್ ಮೊರೆ.
- ಯಾವುದೇ ಪ್ರಬಲ ಸಾಕ್ಷ್ಯಾಧಾರಗಳಿಲ್ಲದ ಕಾರಣ ಶಿಕ್ಷೆ ಅಮಾನತುಗೊಳಿಸುವಂತೆ ಅವರ ಪರ ವಕೀಲರು ವಾದ.
- ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ವಿಭಾಗೀಯ ಪೀಠವು ಸಿಬಿಐಗೆ ನೋಟಿಸ್ ಜಾರಿ ಮಾಡಿದೆ.

ವಕೀಲರ ವಾದವೇನು: ಹಿರಿಯ ವಕೀಲ ಸಿ.ವಿ.ನಾಗೇಶ್ ಅವರು, ಯಾವುದೇ ಪ್ರಬಲ ಸಾಕ್ಷ್ಯಾಧಾರಗಳಿಲ್ಲದಿದ್ದರೂ ವಿನಯ್ ಕುಲಕರ್ಣಿ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ವಿಚಾರಣಾ ಹಂತದಲ್ಲಿ ಆರೋಪಿಗಳು ಜಾಮೀನಿನಲ್ಲಿದ್ದರು. ಈ ಹಿಂದೆ ಸುಪ್ರೀಂ ಕೋರ್ಟ್ ಕೂಡ ಮೆರಿಟ್ ಆಧಾರದ ಮೇಲೆ ಜಾಮೀನು ಮಂಜೂರು ಮಾಡಿತ್ತು. ಪ್ರಕರಣದ 7 ಪ್ರತ್ಯಕ್ಷದರ್ಶಿಗಳು ಸೇರಿ ಪ್ರಾಸಿಕ್ಯೂಷನ್‌ನ ಬಹುತೇಕ ಸಾಕ್ಷಿಗಳು ಪ್ರತಿಕೂಲವಾಗಿದ್ದಾರೆ (ಹೇಳಿಕೆ ಬದಲಿಸಿದ್ದಾರೆ). ಹೀಗಾಗಿ, ಈ ಅಂಶಗಳನ್ನು ಪರಿಗಣಿಸಿ ಶಿಕ್ಷೆ ಅಮಾನತು ಮಾಡಬೇಕೆಂದು ನ್ಯಾಯ ಪೀಠಕ್ಕೆ ಮನವಿ ಮಾಡಿದರು.

ಮತ್ತೊಬ್ಬ ಹಿರಿಯ ವಕೀಲ ಎಂ. ನಾಗಮುತ್ತು ಅವರು, ಕೇವಲ ಪಿತೂರಿ ಆರೋಪದ ಮೇಲೆ ಜೀವಾವಧಿ ಶಿಕ್ಷೆ ನೀಡಲಾಗಿದೆ. ಈ ಆರೋಪಿಯ ವಿರುದ್ಧ ಯಾವುದೇ ಸಾಕ್ಷಿಗಳಿಲ್ಲ ಹಾಗು ಶರಣಾಗಿದ್ದ ವ್ಯಕ್ತಿಯೇ ಪ್ರತಿಕೂಲ ಸಾಕ್ಷಿಯಾಗಿ ದ್ದಾರೆಂದು ನ್ಯಾಯಾಲಯದ ಗಮನ ಸೆಳೆದರು.

ಸಿಬಿಐ ಆಕ್ಷೇಪ- ವಿಚಾರಣೆ ಮುಂದೂಡಿಕೆ

ವಾದ ಆಲಿಸಿದ ನ್ಯಾಯಪೀಠವು, ಸದ್ಯಕ್ಕೆ ಮೆರಿಟ್ ಆಧಾರದ ಮೇಲೆ ವಿಚಾರಣೆ ನಡೆಸುವುದಿಲ್ಲ ಎಂದು ಸ್ಪಷ್ಟಪಡಿಸಿ ಸಿಬಿಐಗೆ ನೋಟೀಸ್ ಜಾರಿ ಮಾಡಿತು. ಇದೇ ವೇಳೆ, ರಜಾಕಾಲದ ಪೀಠದ ಮುಂದೆ ಈ ಅರ್ಜಿಯ ವಿಚಾರಣೆಗೆ ಅವಕಾಶ ನೀಡಬೇಕೆಂಬ ಸಿ.ವಿ.ನಾಗೇಶ್ ಅವರ ಕೋರಿಕೆಯನ್ನು ನ್ಯಾಯಾಲಯ ಪುರಸ್ಕರಿಸಿತು.

ಅದಕ್ಕೆ ಸಿಬಿಐ ಪರ ವಕೀಲ ರಾಹುಲ್ ಕೃಷ್ಣಾರೆಡ್ಡಿ ಅವರು ಆಕ್ಷೇಪ ವ್ಯಕ್ತಪಡಿಸಿ, ವಿಚಾರಣಾಧೀನ ನ್ಯಾಯಾಲಯ ನೀಡಿರುವ ತೀರ್ಪು ಬರೋಬ್ಬರಿ 680 ಪುಟಗಳಷ್ಟಿದೆ. ಅದನ್ನು ಅಧ್ಯಯನ ಮಾಡಿ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶದ ಅಗತ್ಯವಿದೆ ಎಂದರು. ಸಿಬಿಐ ವಕೀಲರ ಮನವಿಯನ್ನು ದಾಖಲಿಸಿಕೊಂಡ ನ್ಯಾಯಾಲಯವು ವಿಚಾರಣೆ ಮುಂದೂಡಿತು.

ರಾಷ್ಟ್ರೀಯ ಹೆದ್ದಾರಿ-75 ಸಮಸ್ಯೆಗಳ ಪರಿಹಾರಕ್ಕೆ ಆಗ್ರಹ

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ಕೊಲ್ಲಹಳ್ಳಿ ಪ್ರದೇಶವನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ75ರಲ್ಲಿ ಉಂಟಾಗಿರುವ ಹಲವು ಗಂಭೀರ ಸಮಸ್ಯೆಗಳನ್ನು ತಕ್ಷಣವೇ ಬಗೆಹರಿಸುವಂತೆ ಕೊಲ್ಲಹಳ್ಳಿ ಸಾರ್ವಜನಿಕ ಹಿತಾಸಕ್ತಿ ಹೋರಾಟ ಸಮಿತಿ ಹಾಗೂ ಎಪಿಎಂಸಿ ಮಾಜಿ ಉಪಾಧ್ಯಕ್ಷರಾದ ಸಲೀಂ ಅಬ್ಬುಲ್ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಹೆದ್ದಾರಿಯ ವಿವಿಧ ಭಾಗಗಳಲ್ಲಿ ಉಂಟಾಗಿರುವ ಮೂಲಭೂತ ಸಮಸ್ಯೆಗಳು ಸಾರ್ವಜನಿಕರ ದೈನಂದಿನ ಜೀವನಕ್ಕೆ ತೀವ್ರ ಅಡಚಣೆ ಉಂಟುಮಾಡುತ್ತಿವೆ ಎಂದು ಹೇಳಿದರು.

ಕೊಲ್ಲಹಳ್ಳಿ ಅಂಡರ್‌ಪಾಸ್‌ನಲ್ಲಿ ಮಳೆ ನೀರು ನಿಂತು ಓಡಾಟಕ್ಕೆ ತೀವ್ರ ತೊಂದರೆ ಉಂಟಾಗುತ್ತಿದೆ. ಕೊಳೆತ ನೀರಿನಿಂದ ಸೊಳ್ಳೆಗಳು ಹಾಗೂ ಬ್ಯಾಕ್ಟೀರಿಯಾ ಹೆಚ್ಚಾಗಿ ಸಾರ್ವಜನಿಕ ಆರೋಗ್ಯಕ್ಕೂ ಅಪಾಯ ಉಂಟಾಗಿದೆ. ಅಂಡರ್‌ಪಾಸ್ ಸೇರಿದಂತೆ ಹಲವೆಡೆ ಹೈಮಾಸ್ಟ್ ಹಾಗೂ ಬೀದಿ ದೀಪಗಳು ಕಾರ್ಯ ನಿರ್ವಹಿಸದಿರುವುದರಿಂದ ರಾತ್ರಿ ವೇಳೆ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಫ್ಲೈ ಓವರ್ ರಸ್ತೆಯ ಮೇಲ್ಭಾಗದಲ್ಲಿ ಮಳೆಗಾಲದಲ್ಲಿ ನೀರು ನಿಂತು ಕೆಸರು ನೀರು ಕೆಳಭಾಗದ ಸರ್ವಿಸ್ ರಸ್ತೆಗೆ ಹರಿದು ಪಾದಚಾರಿಗಳಿಗೆ ಸಂಕಷ್ಟ ಉಂಟುಮಾಡುತ್ತಿದೆ. ಮಳಲಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸಲು ಅಂಡರ್‌ಪಾಸ್ ಅಥವಾ ಮೇಲ್ಸೇತುವೆ ಇಲ್ಲದಿರುವುದರಿಂದ ಅಪಘಾತಗಳು ಹೆಚ್ಚುತ್ತಿರುವುದು ಚಿಂತಾಜನಕವಾಗಿದೆ ಎಂದು ಹೇಳಿದರು.

ಸರ್ವಿಸ್ ರಸ್ತೆಯಿಂದ ಅಂಡರ್ ಪಾಸ್ ಬಳಿ ವಾಹನಗಳು ದಾಟುವ ಸಂದರ್ಭದಲ್ಲಿ ಸರಿಯಾದ ಹಂಪ್‌ಗಳಿಲ್ಲದ ಕಾರಣ ಪದೇಪದೇ ಅಪಘಾತಗಳು ಸಂಭವಿಸುತ್ತಿವೆ. ಹಳೆಯ ಬಿಎಂ ರಸ್ತೆಗೆ ಸಂಪರ್ಕಿಸುವ ತಿರುವುಗಳಲ್ಲಿ ಸಮರ್ಪಕ ವ್ಯವಸ್ಥೆಗಳ ಕೊರತೆಯಿಂದ ಸಂಚಾರ ಅಸ್ತವ್ಯಸ್ತವಾಗಿದೆ. ಕೆಂಪೇಗೌಡ ಪ್ರತಿಮೆ ಬಳಿ ಅವೈಜ್ಞಾನಿಕ ರಸ್ತೆ ನಿರ್ಮಾಣದಿಂದ ದಿನನಿತ್ಯ ಅಪಘಾತಗಳು ಸಂಭವಿಸುತ್ತಿವೆ ಎಂದು ದೂರಿದರು.

ದೋಣಿಗಲ್‌ವಂಜರಾಬಾದ್ ಕೋಟೆ ಮಾರ್ಗದಲ್ಲಿ ಸಂಚಾರಕ್ಕೆ ಅಡಚಣೆ ಉಂಟಾಗಿದ್ದು, ದೋಣಿಗಲ್ ಭಾಗದ ಹೊಸ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿವೆ. ಮಳೆಗಾಲದಲ್ಲಿ ರಸ್ತೆ ಕುಸಿತದ ಭೀತಿ ಎದುರಾಗಿದೆ.ಗುಳಗಳಲೆ ಗ್ರಾಮದ ಸರ್ಕಲ್‌ನಲ್ಲಿ ಅವೈಜ್ಞಾನಿಕ ವಿನ್ಯಾಸದಿಂದ ಕಳೆದ ಎರಡು ವರ್ಷಗಳಲ್ಲಿ ಅನೇಕ ಸಾವು-ನೋವುಗಳು ಸಂಭವಿಸಿರುವುದರಿಂದ ಸಾರ್ವಜನಿಕರ ಜೀವಕ್ಕೆ ಅಪಾಯಕಾರಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇಶದ ಪ್ರಗತಿಗೆ ಎಲ್ಲ ವರ್ಗಗಳ ಒಗ್ಗಟ್ಟು ಅವಶ್ಯಕ

ಆರ್.ಎಸ್.ಎಸ್. ಪ್ರಮುಖ ಗಣಪತಿ ಹೆಗಡೆ

• ಪ್ರಜೋದಯ ವರದಿ

ಆಲೂರು: ಸಮಾಜದ ಎಲ್ಲ ವರ್ಗಗಳ ನಡುವಿನ ಒಗ್ಗಟ್ಟು ದೇಶದ ಪ್ರಗತಿಗೆ ಅವಶ್ಯಕವಾಗಿದೆ ಎಂದು ಕರ್ನಾಟಕ ದಕ್ಷಿಣ ಪ್ರಾಂತದ ಕಾರ್ಯಕಾರಣಿ ಸದಸ್ಯರು ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖರಾದ ಗಣಪತಿ ಹೆಗಡೆ ತಿಳಿಸಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ರಾಷ್ಟ್ರೋದಯ ಸೇವಾ ಚಾರಿಟೇಬಲ್ ಟ್ರಸ್ಟ್ (ರಿ.) ವತಿಯಿಂದ ಸಾಮಾಜಿಕ ಸದ್ಭಾವ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಸಮಾಜದಲ್ಲಿ ಸಾಮರಸ್ಯ, ಏಕತೆ ಮತ್ತು ಪರಸ್ಪರ ಗೌರವದ ಮಹತ್ವ ಇರಬೇಕು. ಒಬ್ಬರನ್ನೊಬ್ಬರು ಜಾತಿ ಮತ ಬೇಧಿಸಿ ಪರಸ್ಪರ ಪ್ರೀತಿ ವಿಶ್ವಾಸದಿಂದ ಸಾಗಿದರೆ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ. ನಾವುಗಳೆಲ್ಲರೂ ಎಂದೆಂದೂ ಸ್ವದೇಶಿ ವಸ್ತುಗಳನ್ನು ಹೆಚ್ಚು ಬಳಸಬೇಕು. ಕುಟುಂಬದ ವ್ಯವಸ್ಥೆಗೆ ಹೆಚ್ಚು ಒತ್ತು ನೀಡುವುದರೊಂದಿಗೆ ನಾವೆಲ್ಲರೂ ದೇಶ ಮೊದಲು ಎಂಬ ಭಾವನೆ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಸಭೆಯಲ್ಲಿ ತಾಲೂಕಿನ ಎಲ್ಲಾ ಸಮುದಾಯಗಳ ಮುಖಂಡರುಗಳು ಹಾಗೂ ಗಣ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ವಿವಿಧ ಸಮುದಾಯಗಳ ಪ್ರತಿನಿಧಿಗಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಮಲೆನಾಡು ಭಾಗಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ

• ಪ್ರಜೋದಯ ವರದಿ

ಬೇಲೂರು: ಕಳೆದ ಹದಿನೈದು ವರ್ಷಗಳಿಂದ ವಾಗಿನಕೆರೆ ರಸ್ತೆ ಅಭಿವೃದ್ಧಿಯಾಗದೆ ಸಾರ್ವಜನಿಕರು ಓಡಾಡಲು ಪರದಾಡುವಂತಾಗಿದ್ದ ಹಿನ್ನೆಲೆಯಲ್ಲಿ ಅವರ ಮನವಿ ಮೇರೆಗೆ ರಸ್ತೆ ಅಭಿವೃದ್ಧಿಗೊಳಿಸಲು ಚಾಲನೆ ನೀಡಲಾಗುತ್ತಿದೆ ಎಂದು ಶಾಸಕ ಎಚ್.ಕೆ. ಸುರೇಶ್ ಅವರು ಹೇಳಿದರು.

ತಾಲ್ಲೂಕಿನ ವಾಗಿನಕೆರೆ ಕಲ್ಲಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಇತ್ತೀಚೆಗೆ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕಿನ ಮಲೆನಾಡು ಭಾಗದಲ್ಲಿ ಹೆಚ್ಚು ಮಳೆಯಾಗುವ ಕಾರಣ ದಿಂದಾಗಿ ರಸ್ತೆಗಳು ಬೇಗ ಹಾಳಾಗುತ್ತವೆ. ಆದರೆ ಕಳೆದ 15 ವರ್ಷಗಳ ಹಿಂದಿನಿಂದಲೂ ಕಲ್ಲಳ್ಳಿ- ವಾಗಿನಕೆರೆ ರಸ್ತೆ ಸಂಪೂರ್ಣವಾಗಿ ಶಿಥಿಲಾವಸ್ತೆ ತಲುಪಿದ್ದರಿಂದ ವಾಹನಗಳಲ್ಲಿ ಓಡಾಡಲು ಹರ ಸಾಹಸ ಪಡುವಂತಾಗಿತ್ತು. ಕೆಲವರು ಬಿದ್ದು ಗಾಯಗೊಂಡಿದ್ದರು ಎಂಬ ಗ್ರಾಮಸ್ಥರ ಹೇಳಿಕೆ ಹಾಗೂ ಮನವಿಯ ಮೇರೆಗೆ 27 ಲಕ್ಷ ರೂ. ಅನುದಾನದಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿ ಮಾಡಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಮೂಲಕ ಬಹು ದಿನಗಳ ಗ್ರಾಮಸ್ಥರ ಬೇಡಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಇನ್ನುಳಿದಿರುವ ರಸ್ತೆ ಮತ್ತು ಗ್ರಾಮದ ಅಭಿವೃದ್ಧಿಗೆ ಬೇಕಾದ ಮೀಲಭೂತ ಸೌಲಭ್ಯಗಳನ್ನು ಕಲ್ಪಿಸಿ ಕೊಡಲು ಕ್ರಮ ಕೈಗೊಳ್ಳಲಾಗುವುದು. ಜತೆಗೆ ಗ್ರಾಮಸ್ಥರಿಗೆ ಕೊಟ್ಟ ಮಾತಿನಂತೆ ಕೆಲಸ ಮಾಡಿಸಿ ಕೊಡಲು ಮುಂದಾಗಿದ್ದೇನೆ. ಗುತ್ತಿಗೆದಾರರು ಕಾಮಗಾರಿಯನ್ನು ಗುಣಮಟ್ಟದಲ್ಲಿ ಮಾಡಿ ಅನುಕೂಲ ಕಲ್ಪಿಸಬೇಕು ಎಂದರು.

ವಾಗಿನಕೆರೆ ಗ್ರಾಮಸ್ಥರಾದ ವಿ.ಎಸ್.ಭೋಜೇಗೌಡ ಮಾತನಾಡಿ, ಸತತ ಹದಿನೈದು ವರ್ಷಗಳ ಹೋರಾಟದ ಫಲವಾಗಿ ಇಂದು ನಮ್ಮ ಗ್ರಾಮವು ರಸ್ತೆ ಯ ಭಾಗ್ಯವನ್ನು ಕಾಣುತ್ತಿದೆ. ಹಿಂದಿನ ಮೂರು ಶಾಸಕರು ಕೇವಲ ರಸ್ತೆಯ ಪ್ಯಾಚ್ ವರ್ಕ್ ಮಾಡಿಕೊಟ್ಟಿದ್ದರು. ಆದರೆ, ಹಾಲಿ ಶಾಸಕ ಎಚ್.ಕೆ.ಸುರೇಶ್ ಅವರು ಕೊಟ್ಟ ಮಾತಿನಂತೆ 27 ಲಕ್ಷ ರೂ. ಅನುದಾನದಲ್ಲಿ ಶಾಶ್ವತವಾದ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ ನೀಡಿರುವರು. ಗುತ್ತಿಗೆದಾರರು ಉತ್ತಮವಾದ ಗುಣಮಟ್ಟದ ಕಾಮಗಾರಿ ನಡೆಸಬೇಕು, ಕಾಟಾಚಾರದ ಕಾಮಗಾರಿ ನಡೆಸಲು ಅವಕಾಶ ನೀಡುವುದಿಲ್ಲ ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಸುಪ್ರೀತ್, ಮನು, ಲೋಕಪ್ಪಗೌಡ, ಗಂಗೆಗೌಡ, ರಂಜಿತ್, ರತನ್, ನವೀನ್, ಪ್ರಕಾಶ್, ಕುಮಾರ್, ಮುಗಪ್ಪ ಗೌಡ, ಸುಬ್ಬೆಗೌಡ, ರಾಜೇಶ್, ಪಾಪು, ರೂಪ ಬೋಜೇಗೌಡ, ಸುಚೇಂದ್ರ, ಮಲ್ಲಿಕಾರ್ಜುನ ಇನ್ನಿತರರು ಹಾಜರಿದ್ದರು.

ಕವಿವಾಣಿ ಜನಪದವಾದಲ್ಲಿ ಅದೇ ಆ ಕವಿಯ ಸುದಿನ

• ಪ್ರಜೋದಯ ವರದಿ

ಹೊಳೆನರಸೀಪುರ: ಕವಿವಾಣಿ ಜನಪದವಾದಲ್ಲಿ ಅದೇ ಆ ಕವಿಯ ಸುದಿನ ಎನ್ನುವಷ್ಟು ಜನರ ಮನದಲ್ಲಿ ಮಿಡಿಯುತ್ತಿದ್ದ ಕವಿತೆ ಅವರ ನುಡಿಯಲ್ಲಿ ಕೇಳಿ ಬರಬೇಕು ಎಂದು ಹಿರಿಯ ಸಾಹಿತಿ ಬಿ.ಆರ್.ಲಕ್ಷ್ಮಣ್ ರಾವ್ ಸಂತೃಪ್ತಿ ವ್ಯಕ್ತಪಡಿಸಿದರು.

ತಾಲ್ಲೂಕಿನ ಪಡುವಲಹಿಪ್ಪೆ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ದೇಸಿ ಅಡುಗೆ, ದೇಸಿ ಉಡುಗೆ ಅನುಸರಿಸಿ ಸುಗ್ಗಿ ಹಬ್ಬ ಆಚರಿಸಿದ್ದ ಕಾರ್ಯಕ್ರಮವನ್ನು ಧವಸ ಹಸನು ಮಾಡಿ ಮಡಿಕೆಗೆ ತುಂಬುವ ಮೂಲಕ ವಿನೂತನವಾಗಿ ಉದ್ಘಾಟಿಸಿ ಮಾತನಾಡಿದ ಅವರು, ಬಹುತೇಕ ಹಾಡುಗಳು ಎಷ್ಟೋ ದಶಕಗಳಿಂದ ಜನರ ಬಾಯಲ್ಲಿ ಸುಳಿಯಾಗಿ ಕೇಳಿಬರುತ್ತವೆ. ಅದನ್ನು ಬರೆದವರು ಯಾರೆಂಬ ಕಲ್ಪನೆಯೂ ಅವರಿಗೆ ಇರುವುದಿಲ್ಲ.ಆದರೆ ರಚಿಸಿದ ಕವಿಗೆ ಅದು ಸುದಿನವಾಗುತ್ತದೆ. ಇದರಿಂದ ನನಗೆ ಪ್ರೇಮ ಕವಿ ಎನ್ನುವುದಕ್ಕಿಂತ ಜನಪದದ ಕವಿ ಎಂದೆನಿಸಿಕೊಳ್ಳುವುದು ಬಹಳ ಇಷ್ಟ. ಜನಪ್ರಿಯ ಸಾಹಿತ್ಯಕ್ಕೆ ಇರುವಷ್ಟು ಮಹತ್ವ ಬೇರೆಲ್ಲೂ ಕಾಣಲಾಗದು. ಕವಿಯಾಗಲಿ, ಸಾಹಿತಿಯಾಗಲಿ ಕೇವಲ ಕಾಲೇಜು ಅಥವಾ ವಿವಿಯ ಪಠ್ಯದಲ್ಲಿ ಉಳಿದರೆಷ್ಟೇ ಸಾಲದು. ಜನರ ಮನದಲ್ಲಿ ಉಳಿಯಬೇಕು. ಪ್ರಶಸ್ತಿಗಳ ಸರಮಾಲೆಗಿಂತ ಜನರ ಪ್ರಿಯತೆ ಅತ್ಯಂತ ಸಂತೃಪ್ತಿ ತಂದುಕೊಡಬಲ್ಲದು ಎಂದರು. ಅವರೇ ಬರೆದ ಸುಬ್ಬಭಟ್ಟರ ಮಗಳೆ ಇದೆಲ್ಲಾ ನಿಂದೇ ತೊಗೋಳೆ ಎಂದು ಹಾಡುವ ಮೂಲಕ ರಂಜಿಸಿದರು.

ಚಲನಚಿತ್ರ ನಿರ್ದೇಶಕ ಬಿ.ಎಸ್. ಲಿಂಗದೇವರು ಮಾತನಾಡಿ, ಹಳ್ಳಿಗಳಲ್ಲಿ ವೃದ್ಧಾಶ್ರಮ ಸ್ಥಾಪನೆಯಾಗುತ್ತಿರುವುದು ಕಳವಳಕಾರಿ ಸಂಗತಿ. ಸಂಬಂಧಗಳ ಸಂಕೋಲೆಯಿಂದ ಕಳಚಿಕೊಂಡಷ್ಟೂ ಮಾನವೀಯ ಮೌಲ್ಯದಿಂದ ದೂರವಾಗುತ್ತೇವೆ. ಜಾಗತೀಕರಣ ಎಷ್ಟೇ ಪ್ರಭಾವಶಾಲಿಯಾಗಲಿ, ನಮ್ಮ ತನವನ್ನು ನಾವು ಎಂದೂ ಮರೆಯಬಾರದು. ವಿದ್ಯಾರ್ಥಿ ದೆಸೆಯಲ್ಲಿನ ನೀವುಗಳು ಹೆತ್ತವರನ್ನು ಆಧರಣೀಯವಾಗಿ ಕಾಣುವ ಮೂಲಕ ಇಂತಹಾ ಹತ್ತಾರು ಕಾರ್ಯಕ್ರಮಗಳಿಗೆ ಅರ್ಥ ಬರುವಂತೆ ಮಾಡಬೇಕಿದೆ ಎಂದು ಅವರು ಸಲಹೆ ನೀಡಿದರು.

ಗ್ರಾಮೀಣ ಪರಂಪರೆ, ಸಂಸ್ಕೃತಿಯನ್ನು ವಿಜ್ರುಂಬಿಸಿದ ವಿದ್ಯಾರ್ಥಿನಿಯರು ಹಾಗೂ ಕಾಲೇಜಿನ ಬೋಧಕ, ಬೋಧಕೇತರರು ದೇಸಿ ಉಡುಗೆ ತೊಟ್ಟು, ದೇಸಿ ಅಡುಗೆಗಳ ರಸದೌತಣ ಸವಿದರು.

ಪತ್ರಕರ್ತ ಬಿ.ಆರ್.ಬೊಮ್ಮೇಗೌಡ, ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಸಿ.ವಿಶ್ವನಾಥ್, ನಿವೃತ್ತ ಪ್ರಾಂಶುಪಾಲ ಡಾ.ಜಿ.ಡಿ.ನಾರಾಯಣ, ಉಪನ್ಯಾಸಕ ಡಾ.ಪಿ.ಆರ್.ಶಿವಕುಮಾರ್ ಹಾಗೂ ಸಂಚಾಲಕ ಡಾ.ಎಚ್.ಎನ್. ದೀಪು ಉಪಸ್ಥಿತರಿದ್ದರು.

ದೇಶದ ಭದ್ರತೆಗಿಂತ 'ಕೈ'ಗೆ ಓಟ್ ಬ್ಯಾಂಕ್ ಮುಖ್ಯ

ದೇಶದ್ರೋಹಿಗಳನ್ನು ಬ್ರದರ್ಸ್ ಎನ್ನುವ ಡಿಕೆಶಿ ಸಿಎಂ ಆಗಲೆತ್ನಿಸುತ್ತಿರುವುದು ದುರಂತ

• ಪ್ರಜೋದಯ ವರದಿ

ಬೆಂಗಳೂರು: ನಾಲ್ಕು ಓಟ್‌ಗೋಸ್ಕರ ದೇಶದ್ರೋಹಿಗಳನ್ನು ಬ್ರದರ್ಸ್ ಎಂದು ಸಮರ್ಥನೆ ಮಾಡಿಕೊಳ್ಳುವ ಸ್ವಾರ್ಥಿಗಳು ನಾಡಿನ ಸಿಎಂ ಆಗಲು ಹೊರಟಿರುವುದು ಕರ್ನಾಟಕದ ದುರಂತ ಎಂದು ಪರೋಕ್ಷವಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್ .ಅಶೋಕ್ ವಾಗ್ದಳಿ ನಡೆಸಿದ್ದಾರೆ.

ತಮ್ಮ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಅಂದು ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟವನ್ನು ಕೇವಲ ಡೈವರ್ಷನ್ ಪಾಲಿಟಿಕ್ಸ್ ಎಂದು ಲೇವಡಿ ಮಾಡಿ ಉಗ್ರರ ಪರ ನಿಂತಿದ್ದ

ಡಿ.ಕೆ ಶಿವಕುಮಾರ್ ಹಾಗೂ ಕಾಂಗ್ರೆಸ್ ನಾಯಕರಿಗೆ ಈಗ ಸತ್ಯದ ದರ್ಶನವಾಗಿದೆ ಎಂದು ಟೀಕಿಸಿದ್ದಾರೆ.

ಅದೇ ಪ್ರಕರಣದ ಉಗ್ರ, ಶಾರೀಕ್‌ನ ಕೃತ್ಯ ಸಾಬೀತಾಗಿದ್ದು, ಎನ್ ಐಎ ನ್ಯಾಯಾಲಯ ಆತನಿಗೆ 10 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ. ರಾಷ್ಟ್ರೀಯ ಭದ್ರತೆಯಂತಹ ಗಂಭೀರ ವಿಚಾರದಲ್ಲೂ ಕೇವಲ ತುಷ್ಟೀಕರಣ ಮತ್ತು ಓಲೈಕೆ ರಾಜಕಾರಣ ಮಾಡುವ ಕಾಂಗ್ರೆಸ್ ಪಕ್ಷದ ನೈಜ ಮುಖವಾಡ ಕಳಚಿದೆ ಎಂದು ಕಿಡಿಕಾರಿದ್ದಾರೆ.

ದೇಶದ ಭದ್ರತೆಗಿಂತ ಕಾಂಗ್ರೆಸ್‌ಗೆ ಓಟ್ ಬ್ಯಾಂಕ್ ರಾಜಕಾರಣವೇ ಮುಖ್ಯವಾಗಿದೆ. ಕಾಂಗ್ರೆಸ್ ಇನ್ನಾದರೂ ಮತಾಂಧರನ್ನು ತಮ ಬ್ರದರ್ಸ್ ಎಂದು ಸಮರ್ಥನೆ ಮಾಡಿಕೊಳ್ಳುವುದನ್ನು ಬಿಡಬೇಕಿದೆ ಎಂದು ಕಾಂಗ್ರೆಸ್ ಸರ್ಕಾರಕ್ಕೆ ಅಶೋಕ್ ಎಚ್ಚರಿಕೆ ನೀಡಿದ್ದಾರೆ.

ವಾಸವಿ ಮಾತೆಯ ಜಯಂತಿ: ವಸಂತೋತ್ಸವ

• ಪ್ರಜೋದಯ ವರದಿ

ಬೇಲೂರು: ಪಟ್ಟಣದಲ್ಲಿ ವಾಸವಿ ಜಯಂತಿ ಅಂಗವಾಗಿ ಮೂರು ದಿನಗಳ ಕಾಲ ಹಬ್ಬದ ವಾತಾವರಣದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಈ ವಿಶೇಷ ಆಚರಣೆಯ ಮೂರನೇ ದಿನವಾದ ಮಂಗಳವಾರ ವಾಸವಿ ಯುವಜನ ಸಂಘದ ವತಿಯಿಂದ ''ವಸಂತೋತ್ಸವ'' ಕಾರ್ಯಕ್ರಮವನ್ನು ವಿಜೃಂಭಣೆಯಿಂದ ನಡೆಸಲಾಯಿತು.

ವರ್ಷಗಳ ಪರಂಪರೆಯಂತೆ ಆಯೋಜಿಸಲಾಗುತ್ತಿರುವ ಈ ವಸಂತೋತ್ಸವ ಕಾರ್ಯಕ್ರಮವು ಭಕ್ತರ ಮನಸೂರೆಗೊಂಡಿದ್ದು, ಸಂಪ್ರದಾಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಅಂಶಗಳನ್ನು ಒಳಗೊಂಡಿದೆ. ಯುವಜನ ಸಂಘದ

ಸಕ್ರಿಯ ಭಾಗವಹಿಸುವಿಕೆಯಿಂದ ಕಾರ್ಯಕ್ರಮ ಮತ್ತಷ್ಟು ಮೆರುಗು ಪಡೆದಿದ್ದು, ಭಕ್ತರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಿದರು.

ಈ ಸಂದರ್ಭದಲ್ಲಿ ಆರ್ಯ ವೈಶ್ಯ ಸಮಾಜದ ಕಾರ್ಯದರ್ಶಿ ಕೆ.ಎಲ್. ಸುದೀಂದ್ರ, ಆರ್ಯವೈಶ್ಯ ಸಮಾಜದ ಅಧ್ಯಕ್ಷ ಬಿ.ಡಿ.ಅಶೋಕ್, ವಾಸವಿ ವನಿತಾ ಸಂಘದ ಅಧ್ಯಕ್ಷೆ ಜ್ಯೋತಿ ಸುರೇಶ್, ಉಪಾಧ್ಯಕ್ಷ ಬಿ.ಎಂ. ಸುರೇಶ್, ಖಜಾಂಚಿ ಬಿ.ಎಸ್. ವಿನಯ್‌ಕುಮಾರ್, ನಿರ್ದೇಶಕರಾದ ಹೆಚ್.ವಿ.ರವೀಂದ್ರನಾಥ್, ವಿಶ್ವನಾಥ್ ಜೆ.ಪ್ರಶಾಂತ್, ಬಿ.ಆರ್. ಉಮೇಶ್, ಬಿ.ಎ.ಆನಂದ್, ಬಿ.ಜೆ.ಪ್ರಶಾಂತ್, ವಾಸವಿ ಯುವಜನ ಸಂಘದ ಅಧ್ಯಕ್ಷ ಬಿ.ಎಸ್. ಶ್ರೀನಿವಾಸ್, ವಾಸವಿ ಫಂಡ್ಸ್ ಅಧ್ಯಕ್ಷ ಬಿ.ಹೆಚ್.ಗುರುರಾಜ್ ಇತರರಿದ್ದರು.

ಪುಸ್ತಕಗಳು ಉತ್ತಮ ಸ್ನೇಹಿತರಾದಾಗ ಮಾತ್ರ ಜ್ಞಾನಿಗಳಾಗಲು ಸಾಧ್ಯ

'ಸ್ಪರ್ಧಾತ್ಮಕ ಯುಗದಲ್ಲಿ ಗ್ರಂಥಾಲಯದ ಪಾತ್ರ' ಉಪನ್ಯಾಸದಲ್ಲಿ ಡಾ.ಜಿ.ಬಿ. ನಾಗರಾಜು

• ಪ್ರಜೋದಯ ವರದಿ

ಹಾಸನ: ಪ್ರತಿಯೊಬ್ಬ ಯುವಕರಿಗೂ ಪುಸ್ತಕಗಳು ಉತ್ತಮ ಸ್ನೇಹಿತರಾದಾಗ ಮಾತ್ರ ಜೀವನದಲ್ಲಿ ಉತ್ತಮ ಜ್ಞಾನಿಗಳಾಗಲು ಸಾಧ್ಯ ಎಂದು ನಗರದ ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನ ಗ್ರಂಥಪಾಲಕ ಡಾ.ಜಿ.ಬಿ. ನಾಗರಾಜು ಅಭಿಪ್ರಾಯಪಟ್ಟರು.

ನಗರದ ಆರ್.ಸಿ. ರಸ್ತೆಯ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐ.ಕ್ಯೂ.ಎ.ಸಿ ಹಾಗೂ ಗ್ರಂಥಾಲಯ ವಿಭಾಗದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಸ್ಪರ್ಧಾತ್ಮಕ ಯುಗದಲ್ಲಿ ಗ್ರಂಥಾಲಯದ ಪಾತ್ರ ಎಂಬ ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಹಾಗೂ ಪುಸ್ತಕ ಪ್ರದರ್ಶನ

ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಾವುದೆ ವ್ಯಕ್ತಿಗೆ ಮಾಹಿತಿಯು ತುಂಬಾ ಮುಖ್ಯವಾಗಿದ್ದು, ಒಂದಿಲ್ಲೊಂದು ಮಾಹಿತಿಯನ್ನು ಪಡೆಯಲು ನಾವುಗಳು ಪುಸ್ತಕಗಳನ್ನು ಅವಲಿಂಬಿಸಬೇಕಾಗಿರುತ್ತದೆ ಎಂದರು.

ಗ್ರಂಥಾಲಯವನ್ನು ಶಕ್ತಿ ಕೇಂದ್ರ ಎಂದು ಕರೆಯುತ್ತೇವೆ ಮತ್ತು ಎಲ್ಲ ಚಟುವಟಿಕೆಗಳ ಕೇಂದ್ರ ಸ್ಥಾನ ಎಂದರು ತಪ್ಪಾಗದು. ಏ.23 ರನ್ನು ಅಂತರಾಷ್ಟ್ರೀಯ ಪುಸ್ತಕ ದಿನ ಎಂದು ಕರೆಯಲಾಗುತ್ತದೆ. ಯುವಕರು ಬದುಕಲ್ಲಿ ಓದುವ ಛಲವನ್ನು ಬೆಳೆಸಿಕೊಂಡು ಓದುವ ಹವ್ಯಾಸ ಬೆಳೆಸಿಕೊಂಡರೆ ಗ್ರಂಥಾಲಯ ಆ ಜೀವನದ ಬೆಳೆವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಗ್ರಂಥಾಲಯದಲ್ಲಿ ನಾವು ಪುಸ್ತಕವನ್ನು ಓದುತ್ತಿದ್ದರೆ ನಮಗೂ ಮತ್ತು ಪುಸ್ತಕಗಳಿಗೂ ಅಭಿನಭಾವ ಸಂಬಂಧ ಬೆಳೆಯುತ್ತದೆ. ಪುಸ್ತಕವನ್ನು ತಲೆ ಬಗ್ಗಿಸಿ ನೋಡಿದರೆ ಅದು ನಮ್ಮನ್ನು ತಲೆ ಎತ್ತಿ ನಡೆಯುವಂತೆ ಮಾಡುತ್ತದೆ. ಎಲ್ಲರೂ ಗ್ರಂಥಾಲಯವನ್ನು ಬಳಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳ ಜ್ಞಾನವನ್ನು ತಿಳಿದುಕೊಳ್ಳಿ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಮಾತನಾಡಿ, ಗ್ರಂಥಾಲಯ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ಅತಿ ಮುಖ್ಯವಾದದ್ದು ನಾವು ಒಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆದರೆ ಅದು ನಮಗೆ ಹೆಚ್ಚಿನ ಜ್ಞಾನವನ್ನು ತಿಳಿಸುತ್ತದೆ ಮತ್ತು ಯಾವ ಯಾವ ಪುಸ್ತಕವನ್ನು ಓದಬೇಕು ಎಂದು ತಿಳಿದುಕೊಳ್ಳಬಹುದು. ವಿದ್ಯಾರ್ಥಿಗಳು ಎಲ್ಲರೂ ಸ್ಪರ್ಧಾತ್ಮಕ ಪರೀಕ್ಷೆಗಳ ಜ್ಞಾನವನ್ನು ಪಡೆದುಕೊಂಡರೆ ಉನ್ನತ ಸ್ಥಾನಕ್ಕೆ ಬೆಳೆಯಬಹುದು ಎಂದು ಹೇಳಿದರು.

ಕಾಲೇಜಿನ ಐಕ್ಯೂಎಸಿ ಸಂಚಾಲಕ ಜಿ.ಆರ್. ಮೋಹನ್ ಕುಮಾರ್, ಗ್ರಂಥಪಾಲಕ ಡಾ.ಬಿ. ಪ್ರದೀಪ್ ಕುಮಾರ್, ಸೋಮಶೇಖರ್ ಹಾಗೂ ಇನ್ನಿತರರು ಹಾಜರಿದ್ದರು.

ರಸ್ತೆ ಬದಿಯಲ್ಲಿನ ಗೂಡಂಗಡಿಗಳಿಂದ ಕಸದ ರಾಶಿ | ಅರಕಲಗೂಡು ಪ.ಪಂ. ವಿರುದ್ಧ ಜನರ ಆಕ್ರೋಶ

ರಾಜಕಾಲುವೆಗೆ ತ್ಯಾಜ್ಯ: ಪಟ್ಟಣದ ಸೌಂದರ್ಯಕ್ಕೆ ಮಾರಕ

– ರವಿ ದುಮ್ಮಿ

• ಪ್ರಜೋದಯ ವರದಿ

ಅರಕಲಗೂಡು: ಪಟ್ಟಣದ ಹೃದಯ ಭಾಗದಲ್ಲಿ ಹಾದುಹೋಗಿರುವ ರಾಜಕಾಲುವೆಗೆ ರಸ್ತೆ ಬದಿಯಲ್ಲಿನ ಗೂಡಂಗಡಿಗಳು, ವಾಣಿಜ್ಯ ಮಳಿಗೆಗಳಿಂದ ಉತ್ಪತ್ತಿಯಾಗುವ ಅನಗತ್ಯ ತ್ಯಾಜ್ಯ ಅಪಾರ ಪ್ರಮಾಣದಲ್ಲಿ ಸೇರುತ್ತಿರುವ ಪರಿಣಾಮ ಅವಸಾನದ ಅಂಚಿಗೆ ತಲುಪಿದ್ದು, ಪಟ್ಟಣದ ಸೌಂದರ್ಯಕ್ಕೆ ಮಾರಕವಾಗಿ ಪರಿಣಮಿಸಿದೆ.

ಪಟ್ಟಣದ ಸರಕಾರಿ ದೊಡ್ಡಕೆರೆಯನ್ನು ಮುಚ್ಚಿ ಸಾರ್ವಜನಿಕ ಬಸ್ ನಿಲ್ದಾಣ, ಕ್ರೀಡಾಂಗಣ, ಉದ್ಯಾನವನ, ಖಾಸಗಿ ವಾಹನಗಳ ನಿಲ್ದಾಣ, ಶಿಕ್ಷಕರ ಭವನ, ಸರ್ಕಾರಿ ಬಾಲಕಿಯರ ಕಾಲೇಜು, ಇಂದಿರಾ ಕ್ಯಾಂಟೀನ್, ನಂದಿನಿ ಹಾಲಿನ ಬೂತ್, ಹಾಪ್ ಕಾಮ್ಸ್ ಹಾಗೂ ಒಂದು ಭಾಗದಲ್ಲಿ ಕೆರೆಯನ್ನು ನಿರ್ಮಿಸಿಕೊಂಡು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಆದರೆ, ಹಾಲಿ ಕೆರೆಯ ನೀರು ಮತ್ತು

ಜನವಸತಿ ಪ್ರದೇಶದ ನೀರು ರಾಜಕಾಲುವೆ ಮೂಲಕವೇ ಮುಂದಿನ ಕೆರೆ ಕಟ್ಟೆಗಳಿಗೆ ಹರಿಯಬೇಕಿದೆ.

ಈ ಸಲುವಾಗಿ 10 ಅಡಿ ಆಳದಲ್ಲಿ ರಾಜಕಾಲುವೆಯನ್ನು ಕಾಂಕ್ರಿಟ್ ಸ್ಲ್ಯಾಬ್ ಮೂಲಕ ನಿರ್ಮಿಸಿ ಮುಚ್ಚಲಾಗಿದೆ. ಈ ಮುಚ್ಚಿರುವ ಜಾಗದಲ್ಲಿ ಪಟ್ಟಣದ ಮುಖ್ಯ ರಸ್ತೆ ಕೂಡ ಹಾದುಹೋಗಿದೆ. ಮುಚ್ಚಿರುವ ಕಾಲುವೆ ಜಾಗದಲ್ಲಿ ಪಾನಿಪೂರಿ, ಗೋಬಿ, ಕಬ್ಬಿನ ಜ್ಯೂಸ್ ಗಾಡಿಗಳು, ತಿಂಡಿಗಳ ಗಾಡಿಗಳು, ಕಲ್ಲಂಗಡಿ, ಎಳನೀರು, ಹೂವಿನ ವ್ಯಾಪಾರಿ, ಬಾಳೆ, ಸೇಬು ಹಣ್ಣುಗಳು, ತರಕಾರಿ ವ್ಯಾಪಾರ ಸೇರಿದಂತೆ ಇತರೆ ಗೂಡಂಗಡಿಗಳ ಕಾರು- ಬಾರು ಜೋರಾಗಿ ಎಗ್ಗಿಲ್ಲದೆ ನಡೆಯುತ್ತಿದೆ.

ಅನುಪಯುಕ್ತ ತ್ಯಾಜ್ಯ ರಾಜ ಕಾಲುವೆ ಪಾಲು: ಹೊಸ ಬಸ್ ನಿಲ್ದಾಣ,ಅನಕೃ ವೃತ್ತ, ಇಂದಿರಾ ಕ್ಯಾಂಟೀನ್ ವ್ಯಾಪ್ತಿಯಲ್ಲಿ ಹತ್ತಾರು ಗೂಡಂಗಡಿಗಳು ಕಾರ್ಯ ನಿರ್ವಹಿಸುತ್ತಿವೆ. ಹೆಚ್ಚಾಗಿ ಪಾನಿಪೂರಿ, ಗೋಬಿ, ತಿಂಡಿ ಅಂಗಡಿಗಳು, ತರಕಾರಿ ಮಾರಾಟ ಮಾಡುವ ಗಾಡಿಗಳು ಕಂಡು ಬರುತ್ತವೆ. ಇಲ್ಲಿ ಹೆಚ್ಚಾಗಿ ಅನಗತ್ಯವಾದ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಇದನ್ನು ಮುಂಜಾನೆತನಕ ಇಟ್ಟುಕೊಳ್ಳಲು ಸಾಧ್ಯವಿಲ್ಲ, ಹಾಗಾಗಿ ಈ ತ್ಯಾಜ್ಯವನ್ನು ನೇರವಾಗಿ ರಾಜಕಾಲುವೆಗೆ ಹಾಕಲಾಗುತ್ತಿದೆ.ಅಲ್ಲದೆ ಇಲ್ಲಿನ ವಾಣಿಜ್ಯ ಮಳಿಗೆಗಳಿಂದಲೂ ಉತ್ಪತ್ತಿಯಾಗುವ ತ್ಯಾಜ್ಯವನ್ನು ವರ್ತಕರು ನೇರವಾಗಿ ರಾಜಕಾಲುವೆಗೆ ಹಾಕುತ್ತಿರುವುದು ಕಂಡುಬಂದಿದೆ. ಹೀಗಾಗಿ ಕಸದಿಂದ ತುಂಬಿರುವ ರಾಜಕಾಲುವೆ ಮುಚ್ಚುತ್ತಿದೆ.

ಕಸ ಸಂಗ್ರಹಣೆಗೆ ಕ್ರಮ ವಹಿಸಲು ಮನವಿ: ರಸ್ತೆ ಬದಿಗಳಲ್ಲಿನ ಗೂಡಂಗಡಿಗಳಿಂದ ನಿತ್ಯವೂ ಅನಗತ್ಯ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇಂತಹ ಸ್ಥಳಗಳಲ್ಲಿ ಕಸ ಸಂಗ್ರಹಣೆ ಡಬ್ಬ ಅಥವಾ ಇನ್ನಿತರ ಕ್ರಮ ಕೈಗೊಂಡರೇ ಅನಗತ್ಯ ತ್ಯಾಜ್ಯ ಸಾರ್ವಜನಿಕ ಸ್ಥಳ, ಚರಂಡಿಗೆ ಸೇರುವುದನ್ನು ತಡೆಗಟ್ಟಬಹುದಾಗಿದೆ. ರಸ್ತೆ ಬದಿ ಅಂಗಡಿಗಳು ಬೆಳಿಗ್ಗೆ 10 ರಿಂದ ರಾತ್ರಿ 9 ರ ತನಕ ಕಾರ್ಯ ನಿರ್ವಹಿಸುತ್ತವೆ. ಹಾಗಾಗಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು ಅತ್ಯವಶ್ಯಕವಾಗಿದೆ ಎಂಬುದು ಇಲ್ಲಿನ ಸಾರ್ವಜನಿಕರ ಆಗ್ರಹವಾಗಿದೆ.

ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ

ಪಟ್ಟಣದಲ್ಲಿ ರಸ್ತೆ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ. ಈ ಸಲುವಾಗಿ ರಸ್ತೆ ಬದಿ ಅಂಗಡಿಗಳಿಂದ ಉತ್ಪತ್ತಿಯಾಗುತ್ತಿರುವ ಅನಗತ್ಯ ತ್ಯಾಜ್ಯಗಳ ಬಗ್ಗೆ ಗಮನಹರಿಸಲು ಸಾಧ್ಯವಾಗುತ್ತಿಲ್ಲ. ನಿತ್ಯವೂ ಪಟ್ಟಣದ ಸ್ವಚ್ಛತೆ, ಸಂಗ್ರಹಣೆಯನ್ನು ಕೈಗೊಳ್ಳಲಾಗುತ್ತಿದೆ. ರಾಜಕಾಲುವೆಗೆ ಸೇರುತ್ತಿರುವ ತ್ಯಾಜ್ಯ ನಿರ್ವಹಣೆ ಹಾಗೂ ಸ್ವಚ್ಛತೆ ಕುರಿತು ಮುಖ್ಯಾಧಿಕಾರಿಯೊಂದಿಗೆ ಚರ್ಚಿಸಿ ಕ್ರಮ ವಹಿಸಲಾಗುವುದು.

– ಚೇತನ್‌ಕುಮಾರ್, ಆರೋಗ್ಯ ನಿರೀಕ್ಷಕ, ಪಪಂ, ಅರಕಲಗೂಡು.

ಬೇಲೂರಲ್ಲಿ ಶಂಕರ ಉತ್ಸವ ಮೂರ್ತಿ ಮೆರವಣಿಗೆ

• ಪ್ರಜೋದಯ ವರದಿ

ಬೇಲೂರು: ಪಟ್ಟಣದ ಕೋಟೆ ಶ್ರೀ ನಂಜುಂಡೇಶ್ವರ ದೇಗುಲದಲ್ಲಿ ಪಂಚಮಿಯಿಂದ ದ್ವಾದಶಿವರೆಗೆ ಶ್ರೀ ಶಂಕರಾಚಾರ್ಯರ ಆಚರಿಸಿ ಮಂಗಳವಾರ ಎಂಟು ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ವೇದಬ್ರಹ್ಮ ಕೆ.ಆರ್.ಮಂಜುನಾಥ್ ಮಾತನಾಡಿ, ಜಗದ್ಗುರು ಆದಿ ಶಂಕರಾಚಾರ್ಯರು ಭಾರತೀಯ ಸನಾತನ ಧರ್ಮಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಲು ಇಂತಹ ಧಾರ್ಮಿಕ ಕಾರ್ಯಕ್ರಮಗಳು ಅತ್ಯಗತ್ಯವಾಗಿದೆ. ವೈಶಾಖ ಶುದ್ಧ ಪಂಚಮಿಯಿಂದ (ಶಂಕರ ಜಯಂತಿ) ದ್ವಾದಶಿಯವರೆಗೆ ನಂಜುಂಡೇಶ್ವರ ದೇಗುಲದಲ್ಲಿ ಸತತವಾಗಿ ಕಾರ್ಯಕ್ರಮಗಳು ನಡೆದಿವೆ. 50 ವರ್ಷಗಳ ಪುರಾತನ ಶಂಕರಾಚಾರ್ಯರ ಮೂರ್ತಿಗೆ ವಿಶೇಷ ಅಭಿಷೇಕ, ಪೂಜೆ ಮತ್ತು ಅಷ್ಟೋತ್ತರ ಅರ್ಚನೆಗಳನ್ನು ಮಾಡಲಾಗಿದೆ. ಶಂಕರ ಭಗವತ್ಪಾದರು ರಚಿಸಿದ ಸ್ತೋತ್ರಗಳು ಮತ್ತು ಭಾಷ್ಯಗಳ ಪಾರಾಯಣ ಈ ಸಂದರ್ಭದ ಪ್ರಮುಖವಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಬ್ರಾಹ್ಮಣ ಸ್ಮಾರ್ತ ಮಂಡಳಿ ಅಧ್ಯಕ್ಷ ತೊ.ಚ.ನರಸಿಂಹಮೂರ್ತಿ ಮಾತನಾಡಿ, ಕಳೆದ 50 ವರ್ಷಗಳಿಂದಲೂ ನಂಜುಂಡೇಶ್ವರ ದೇಗುಲದಲ್ಲಿರುವ ಶಂಕರಾಚಾರ್ಯರ ಮೂರ್ತಿಗೆ ಜಯಂತಿಯ ಅಂಗವಾಗಿ ಏಳು ದಿನ ವಿಶೇಷ ಪೂಜೆ ಪಾರಾಯಣ ಹಮ್ಮಿಕೊಳ್ಳಲಾಗಿತ್ತು. ಆದಿ ಶಂಕರಾಚಾರ್ಯರು ಕೇವಲ 32 ವರ್ಷಗಳ ಜೀವಿತಾವಧಿಯಲ್ಲಿ ಭಾರತದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿ, ಅದ್ವೈತ ವೇದಾಂತದ ಪ್ರಚಾರ ಮಾಡಿದರು. ಶ್ರೀ ಚನ್ನಕೇಶವ ಸ್ವಾಮಿಯಂತಹ ವೈಷ್ಣವ ಕ್ಷೇತ್ರದಲ್ಲಿ ಶಂಕರ ಜಯಂತಿ ಆಚರಿಸುವುದು ಹರಿ - ಹರರಲ್ಲಿ ಭೇದವಿಲ್ಲ ಎಂಬ ಅವರ ತತ್ವಕ್ಕೆ ಸಾಕ್ಷಿಯಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಶಂಕರಾಚಾರ್ಯರ ಉತ್ಸವ ಮೂರ್ತಿಯನ್ನು ಎಂಟು ಬೀದಿಗಳಲ್ಲಿ ಮಂಗಳವಾದ್ಯ ಹಾಗೂ ಗಾಯತ್ರಿ ಭಜನಾ ಮಂಡಳಿ ಮತ್ತು ವಿಪ್ರಭಾಂದವರ ಜಯಘೋಷದ ನಡುವೆ ಸಡಗರ ಸಂಭ್ರಮದಿಂದ ಮೆರವಣಿಗೆ ಮಾಡಲಾಯಿತು. ನಂತರ ಪ್ರಸಾದ ವಿನಿಯೋಗ ಕಾರ್ಯಕ್ರಮ ಏರ್ಪಡಿಸಲಾಗಿತ್ತು ಏರ್ಪಡಿಸಲಾಗಿತ್ತು.

ಬ್ರಾಹ್ಮಣ ಸ್ಮಾರ್ತ ಮಂಡಳಿಯ ಶಕ್ತಿಮೂರ್ತಿ, ರವೀಂದ್ರ, ಚಂದ್ರಶೇಖರ್, ರಮೇಶ್ ಆನಂಬಿ, ಸುರೇಶ್, ನಾರಾಯಣರಾವ್, ಸುರೇಶ್, ನಾಗರಾಜ್, ನಾಗಭೂಷಣ್, ಶಾರದಮ್ಮ ಹಾಗೂ ಭಕ್ತರು ಹಾಜರಿದ್ದರು.

ಧಾರ್ಮಿಕ ಸಂಸ್ಥೆಗಳಲ್ಲಿ ಅರಾಜಕತೆ ಸೃಷ್ಟಿಗೆ ಅವಕಾಶವಿಲ್ಲ

ನಿರ್ವಹಣೆ ಹಕ್ಕಿನ ಹೆಸರಲ್ಲಿ ಕಾನೂನು ಮೀರುವಂತಿಲ್ಲ | ಸುಪ್ರೀಂ ಕೋರ್ಟ್

• ಪ್ರಜೋದಯ ವರದಿ

ನವದೆಹಲಿ: ಧಾರ್ಮಿಕ ಸಂಸ್ಥೆಗಳ ನಿರ್ವಹಣೆಯ ಹಕ್ಕಿನ ಹೆಸರಿನಲ್ಲಿ ಅರಾಜಕತೆಗೆ ಅವಕಾಶ ನೀಡಲು ಸಾಧ್ಯವಿಲ್ಲವೆಂದು ಸುಪ್ರೀಂ ಕೋರ್ಟ್ ಮಂಗಳವಾರ ಅಭಿಪ್ರಾಯಪಟ್ಟಿದೆ.

ಧಾರ್ಮಿಕ ಸಂಸ್ಥೆಯನ್ನು ನಿರ್ವಹಿಸುವ ಹಕ್ಕು ಎಂದರೆ ಅಲ್ಲಿ ಯಾವುದೇ ನಿಯಮಾವಳಿಗಳು ಇರಬಾರದು ಎಂದರ್ಥವಲ್ಲ. ಸಂಸ್ಥೆಯ ಕಾರ್ಯನಿರ್ವಹಣೆಗೆ ಸಂಬಂಧಿಸಿ ನಿರ್ದಿಷ್ಟ ಮಾದರಿ ಹಾಗು ನಿಯಮಗಳನ್ನು ರೂಪಿಸುವುದು ಅತ್ಯಗತ್ಯವೆಂದು ನ್ಯಾಯಾಲಯ ಪ್ರತಿಪಾದಿಸಿದೆ.

ಕೇರಳದ ಶಬರಿಮಲೆ ದೇವಸ್ಥಾನ ಸೇರಿ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯ ಮತ್ತು ಬಹು ಧರ್ಮಗಳು ಆಚರಿಸುವ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿಯ ಕುರಿತು ಅರ್ಜಿಗಳನ್ನು ಆಲಿಸಿದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠ, ಧಾರ್ಮಿಕ ಸಂಸ್ಥೆಯ ಸ್ವಾಯತ್ತತೆ ಮತ್ತು ಸಾಂಸ್ಥಿಕ ಚೌಕಟ್ಟಿನ ನಡುವೆ ಸಮತೋಲನ ಇರಬೇಕೆಂದು ಅಭಿಪ್ರಾಯಪಟ್ಟಿತು.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಎಂ.ಎಂ.ಸುಂದ್ರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ್ ಕುಮಾರ್, ಆಗಸ್ಟಿನ್ ಜಾರ್ಜ್ ಮಸಿಹ್, ಪ್ರಸನ್ನ ಬಿ.ವರಾಳೆ,

ಆರ್.ಮಹಾದೇವನ್ ಮತ್ತು ಜಾಯ್ಮಲ್ಯ ಬಾಗ್ಚಿ ಅವರನ್ನು ಪೀಠವು ಒಳಗೊಂಡಿತ್ತು.

ಹಜರತ್ ಖ್ವಾಜಾ ನಿಜಾಮುದ್ದೀನ್ ಔಲಿಯಾ ಅವರ ದರ್ಗಾಕ್ಕೆ ಸಂಬಂಧಿಸಿದ ಅರ್ಜಿದಾರ ಪೀರ್ಜಾದಾ ಸೈಯದ್ ಅಲ್ತಮಾಶ್ ನಿಜಾಮಿ ಪರವಾಗಿ ವಾದ ಮಂಡಿಸಿದ ವಕೀಲ ನಿಜಾಮ್ ಪಾಷಾ, ದರ್ಗಾ ಎಂದರೆ ಸಂತರನ್ನು ಸಮಾಧಿ ಮಾಡುವ ಸ್ಥಳವೆಂದು ವಾದಿಸಿದರು. ಇಸ್ಲಾಂನಲ್ಲಿ ಮರಣದ ನಂತರ ಸಂತರ ಸ್ಥಾನಮಾನದ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಆದರೆ ಸೂಫಿ ನಂಬಿಕೆಯ ವ್ಯವಸ್ಥೆಯಲ್ಲಿ ಸಂತರನ್ನು ಸಮಾಧಿ ಮಾಡಿದ ಸ್ಥಳಕ್ಕೆ ಅಪಾರವಾದ ಗೌರವವಿದೆ.

ಭಾರತದಲ್ಲಿ ಸೂಫಿ ನಂಬಿಕೆಯ ವ್ಯವಸ್ಥೆಯು ಚಿಶ್ತಿಯಾ, ಖಾದ್ರಿಯಾ, ನಕ್ಷ್ಬಂದಿಯಾ ಮತ್ತು ಸುಹ್ರವರ್ದಿಯಾ ಸೇರಿ ಹಲವಾರು ಪ್ರಮುಖ ಕ್ರಮಗಳನ್ನು ಒಳಗೊಂಡಿದೆ. ಪ್ರಸ್ತುತ ಪ್ರಕರಣವು ಚಿಶ್ತಿಯಾ ಕ್ರಮಕ್ಕೆ ಸಂಬಂಧಿಸಿದೆ. ಈ ವ್ಯವಸ್ಥೆಯು ಸ್ಪಷ್ಟವಾಗಿ ಧಾರ್ಮಿಕ ಪಂಗಡವನ್ನು ರೂಪಿಸುತ್ತದೆಂದು ನಾನು ಹೇಳುತ್ತೇನೆ. ಹಜರತ್ ನಿಜಾಮುದ್ದೀನ್ ಔಲಿಯಾ ಅವರ ಬೋಧನೆಗಳನ್ನು ನೋಡಿದರೆ, ರೋಜಾ, ನಮಾಜ್, ಹಜ್, ಜಕಾತ್‌ನಂತಹ ಇಸ್ಲಾಮಿಕ್ ಆಚರಣೆಗಳ ಅನುಸರಣೆಗೆ ಒತ್ತು ನೀಡಲಾಗಿದೆ ಎಂದು ಹೇಳಿದರು.

ಬಳಿಕ ಮಾತನಾಡಿದ ನ್ಯಾಯಮೂರ್ತಿ ಅಮಾನುಲ್ಲಾ ಅವರು, ನಿರ್ವಹಣೆಯ ಹಕ್ಕು ಎಂದರೆ ಅಲ್ಲಿ ಯಾವುದೇ ಸಾಂಸ್ಥಿಕ ಚೌಕಟ್ಟು ಇರಬಾರದು ಎಂದಲ್ಲ. ಪ್ರತಿಯೊಂದಕ್ಕೂ ಒಂದು ಕಾರ್ಯವಿಧಾನ ಎಂಬುದು ಇರಲೇಬೇಕೆಂದು ತಿಳಿಸಿದರು.

ಯಾವುದೇ ದರ್ಗಾ ಅಥವಾ ದೇವಸ್ಥಾನವನ್ನು ತೆಗೆದುಕೊಳ್ಳಿ, ಅಲ್ಲಿ ಆ ಸಂಸ್ಥೆಗೆ ಸಂಬಂಧಿಸಿದ ಕೆಲವು ಮೂಲಭೂತ ಅಂಶಗಳು, ಪೂಜಾ ವಿಧಾನಗಳು ಹಾಗು ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸುವ ಒಂದು ಕ್ರಮ ಇರುತ್ತದೆ. ಅದನ್ನು ಯಾರಾದರೂ ನಿಯಂತ್ರಿಸಲೇಬೇಕು. ಅಲ್ಲಿ ಅರಾಜಕತೆಗೆ ಅವಕಾಶವಿರಬಾರದೆಂದು ನ್ಯಾಯಪೀಠ ಹೇಳಿತು.

ನಾನು ಇಷ್ಟ ಬಂದಂತೆ ಮಾಡುತ್ತೇನೆ ಅಥವಾ ಯಾವುದೇ ನಿಯಂತ್ರಣವಿಲ್ಲದೆ ಯಾವಾಗ ಬೇಕಿದ್ದರೂ ಬಾಗಿಲು ತೆರೆದಿರುತ್ತದೆಂದು ಪ್ರತಿಯೊಬ್ಬರೂ ಹೇಳಲು ಸಾಧ್ಯವಿಲ್ಲ. ಹೀಗಾಗಿ, ಆ ಸಂಸ್ಥೆಯನ್ನು ನಿರ್ವಹಿಸುವ ಮಂಡಳಿ ಯಾವುದು ಎಂಬುದು ಮುಖ್ಯವಾಗುತ್ತದೆ. ನಿಯಂತ್ರಣ ಅತ್ಯಗತ್ಯ ಆಗಿರುವುದರಿಂದಲೇ ಇಲ್ಲಿ ಕಾನೂನಿನ ರಕ್ಷಣೆ ಬೇಕಾಗುತ್ತದೆ. ಅದೇ ಸಮಯದಲ್ಲಿ ಈ ನಿಯಮಗಳು ಸಾಂವಿಧಾನಿಕ ಮಿತಿಗಳನ್ನು ಮೀರುವಂತಿಲ್ಲ. ಸಂವಿಧಾನದ ಮಾನದಂಡಗಳ ಅಡಿಯಲ್ಲಿ ತಾರತಮ್ಯಕ್ಕೆ ಅವಕಾಶ ಇರಬಾರದೆಂದು ನ್ಯಾ.ಅಮಾನುಲ್ಲಾ ಅಭಿಪ್ರಾಯಪಟ್ಟರು. ಪ್ರತಿಯೊಂದು ಸಂಸ್ಥೆಯೂ ತನ್ನದೇ ಆದ ನಿಯಮಾವಳಿಗಳನ್ನು ಹೊಂದಿರಬೇಕು. ಅದನ್ನು ವ್ಯಕ್ತಿಗತವಾಗಿ ನಿರ್ಧರಿಸಲು ಸಾಧ್ಯವಿಲ್ಲವೆಂದು ನ್ಯಾಯಪೀಠವು ಸ್ಪಷ್ಟಪಡಿಸಿತು.

2018ರ ಸೆಪ್ಟೆಂಬರ್‌ನಲ್ಲಿ 4:1ರ ಬಹುಮತದಲ್ಲಿ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠ ನೀಡಿದ ತೀರ್ಪಿನಲ್ಲಿ, ಶಬರಿಮಲೆಯ ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ 10 ರಿಂದ 50 ವರ್ಷ ವಯಸ್ಸಿನ ಮಹಿಳೆಯರ ಪ್ರವೇಶದ ಮೇಲಿದ್ದ ನಿಷೇಧವನ್ನು ತೆರವುಗೊಳಿಸಿತ್ತು. ಶತಮಾನಗಳಷ್ಟು ಹಳೆಯ ಈ ಹಿಂದೂ ಧಾರ್ಮಿಕ ಆಚರಣೆಯು ಕಾನೂನು ಬಾಹಿರ ಮತ್ತು ಅಸಂವಿಧಾನಿಕ ಎಂದು ಕೋರ್ಟ್ ಹೇಳಿತ್ತು.

ಎಸ್‌ಸಿಗಳಿಗೆ ಒಳಮೀಸಲಾತಿ ಜಾರಿಗೊಳಿಸಿ ಸರ್ಕಾರ ಆದೇಶ

• ಪ್ರಜೋದಯ ವರದಿ

ಬೆಂಗಳೂರು: ಪರಿಶಿಷ್ಟ ಜಾತಿಗೆ ಲಭ್ಯ ಶೇ.15 ಮೀಸಲಾತಿಯಲ್ಲಿ ಪ್ರವರ್ಗ ಎ (ಎಡಗೈ ಸಂಬಂಧಿತ ಜಾತಿಗಳು), ಪ್ರವರ್ಗ ಬಿ (ಬಲಗೈ ಸಂಬಂಧಿತ ಜಾತಿ) ಮತ್ತು ಪ್ರವರ್ಗ ಸಿಗೆ (ಸ್ಪೃಶ್ಯ, ಅತಿ ಸೂಕ್ಷ್ಮ, ಸೂಕ್ಷ್ಮ ಅಲೆಮಾರಿ ಜಾತಿಗಳು) ಕ್ರಮವಾಗಿ ಶೇ.5.25, 5.25, 4.50 ಪ್ರಮಾಣದಲ್ಲಿ ಒಳ ಮೀಸಲಾತಿ ಜಾರಿಗೊಳಿಸಿ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ. ಆ ಬೆನ್ನಲ್ಲೆ, ಈಗಾಗಲೇ ಆರ್ಥಿಕ ಇಲಾಖೆ ಅನುಮೋದನೆ ನೀಡಿರುವ 56,432 ಹುದ್ದೆಗಳ ನೇರ ನೇಮಕಾತಿಗೆ ತುರ್ತು ಕ್ರಮ ಕೈಗೊಳ್ಳಬೇಕೆಂದು ಎಲ್ಲಾ ನೇಮಕಾತಿ ಪ್ರಾಧಿಕಾರ ಗಳಿಗೆ ಸೂಚನೆಯನ್ನೂ ನೀಡಿದೆ. ಪ್ರವರ್ಗ ಸಿಗೆ ಲಭ್ಯವಾಗುವ ಹುದ್ದೆಗಳಲ್ಲಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಾತಿ ಸೀಟುಗಳಲ್ಲಿ ಶೇ.20ರಷ್ಟನ್ನು ಪರಿಶಿಷ್ಟ ಜಾತಿಗಳಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಲಾಗುವುದು. ಒಂದೊಮ್ಮೆ59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಲಭ್ಯವಾಗದೇ ಇದ್ದರೆ, ಆ ಹುದ್ದೆಗಳನ್ನು ಹಾಗು ಪ್ರವೇಶಾತಿ ಸೀಟುಗಳನ್ನು ಪ್ರವರ್ಗ ಸಿಯಲ್ಲಿರುವ ಇತರ ಜಾತಿಗಳಿಗೆ ನೀಡಲಾಗುವುದೆಂದು ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ನೇಮಕಾತಿಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸಲು 400 ರೋಸ್ಟರ್ ಬಿಂದುಗಳ ವರ್ತುಲಗಳನ್ನು ಪಾಲಿಸಲಾಗುವುದು. ಯಾವ ವೃಂದದಲ್ಲಿ ಪರಿಶಿಷ್ಟ ಜಾತಿಯ ರೋಸ್ಟರ್ ಬಿಂದುಗಳು ಮೂರಕ್ಕಿಂತ ಕಡಿಮೆ ಲಭ್ಯವಾಗದೇ ಇದ್ದರೆ, ಪರಿಶಿಷ್ಟ ಜಾತಿಗೆ ಮೀಸಲಾದ ಆ ಹುದ್ದೆಗಳನ್ನು ಪರಿಶಿಷ್ಟ ಜಾತಿ (ಸಾಮಾನ್ಯ) ಎಂದು ಪರಿಗಣಿಸಿ ನೇಮಕಾತಿ ಮಾಡಿಕೊಳ್ಳಲಾಗುವುದೆಂದು ಆದೇಶದಲ್ಲಿ ವಿವರಿಸಲಾಗಿದೆ. ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶದ ಅನ್ವಯ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ.17ರಿಂದ ಶೇ.15ಕ್ಕೆ ಸೀಮಿತಗೊಳಿಸಿ ಒಳ ಮೀಸಲಾತಿ ಜಾರಿಗೊಳಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡ ದವರಿಗೆ ರಾಜ್ಯ ಸರ್ಕಾರ ಹೆಚ್ಚಿಸಿರುವ ಶೇ.24ರಷ್ಟು ಮೀಸಲಾತಿ ಪ್ರಮಾಣವನ್ನು ಕೋರ್ಟ್ ಒಪ್ಪಿದರೆ, ಈ ಹೆಚ್ಚುವರಿ ಶೇ.6ರಷ್ಟು ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ನೇಮಕಾತಿ ಮಾಡಬೇಕೆಂದೂ ಆದೇಶದಲ್ಲಿದೆ.

ತಕ್ಷಣ ನೇಮಕಾತಿ ಅಧಿಸೂಚನೆ: ಸರ್ಕಾರ 2025ರ ಸೆ.3ರಂದು ಹೊರಡಿಸಿದ್ದ ಆದೇಶದ ಅನ್ವಯ ಒಳ ಮೀಸಲಾತಿ ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆಯ ಹಂತದಲ್ಲಿರುವ ಅಥವಾ 2026ರ ಫೆ.27ರಂದು ಹೊರಡಿಸಿದ ಆದೇಶದ ಅನ್ವಯ ಒಳ ಮೀಸ ಲಾತಿ ಅಳವಡಿಸದೇ ಹೊರಡಿಸಿರುವ ಎಲ್ಲಾ ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು ಪ್ರವರ್ಗ ಎ, ಪ್ರವರ್ಗ ಬಿ, ಪ್ರವರ್ಗ ಸಿಗೆ ಕ್ರಮವಾಗಿ ಶೇ.5.25, 5.25, 4.50 ಒಳ ಮೀಸಲಾತಿ ಅಳವಡಿಸಿ ತಕ್ಷಣ ಪರಿಷ್ಕೃತ ನೇಮಕಾತಿ ಅಧಿಸೂಚನೆ ಹೊರಡಿಸಿ, ನೇಮಕಾತಿಗಳನ್ನು ಮಾಡಬೇಕೆಂದು ರಾಜ್ಯ ಸರ್ಕಾರ ಸೂಚನೆ ನೀಡಿದೆ.

ಚಿನ್ನಾಭರಣ ಕಳವಿಗೆ ಯತ್ನ: ಮನೆ ಮಾಲೀಕನ ಮೇಲೆ ಹಲ್ಲೆ

ಹಾಸನ: ಚಿನ್ನಾಭರಣ ಕಳವು ಮಾಡುತ್ತಿದ್ದ ವೇಳೆ ಸಿಕ್ಕಿ ಬಿದ್ದ ವೃದ್ಧ ದಂಪತಿ, ಮನೆ ಮಾಲೀಕನ ಮೇಲೆ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಚಿಕ್ಕಗದ್ದವಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಲೋಕೇಶ್ ಎಂಬುವವರ ಮನೆಗೆ ರಾಜಯ್ಯ ಹಾಗು ಗಂಗಮ್ಮ ದಂಪತಿ ಸೋಮವಾರ ತಡರಾತ್ರಿ ನುಗ್ಗಿ ಚಿನ್ನಾಭರಣ, ನಗದು ದೋಚಿದ್ದರು ಎನ್ನಲಾಗಿದೆ. 4 ದಿನಗಳ ಹಿಂದಷ್ಟೇ (ಏ.24) ರಂದು ಹೊಸ ಮನೆ ಗೃಹ ಪ್ರವೇಶ ಮಾಡಿದ್ದ ಲೋಕೇಶ್ ಹಾಗು ಕುಟುಂಬಸ್ಥರು, ತಮ್ಮ ಹಳೆಯ ಮನೆಗೆ ಬಾಗಿಲು ಹಾಕಿಕೊಂಡು ಹೊಸ ಮನೆಗೆ ತೆರಳಿದ್ದರು. ರಾತ್ರಿ ನಂತರ ಊಟ ಮುಗಿಸಿ ಕೊಂಡು ಲೋಕೇಶ್ ಹಳೆ ಮನೆಯಲ್ಲೇ ಮಲಗಲು ವಾಪಸ್ ಬಂದ ವೇಳೆ ಬಾಗಿಲಿಗೆ ಹಾಕಿದ್ದ ಬೀಗ ಮುರಿದಿರುವುದು ಕಂಡು ಬಂದಿದೆ.

ಆತಂಕದಿಂದ ಏನಾಗಿದೆ ಎಂದು ಒಳಗೆ ಹೋಗಿ ನೋಡಿದಾಗ ರಾಜಯ್ಯ-ಗಂಗಮ್ಮ ದಂಪತಿ ಮನೆ ಒಳಗೆ ಇದ್ದರು. ಈ ವೇಳೆ ನೀವು ಇಲ್ಲೇನು ಮಾಡುತ್ತಿದ್ದೀರಿ ಎಂದು ಲೋಕೇಶ್, ದಂಪತಿಯನ್ನು ಪ್ರಶ್ನೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಎರಡೂ ಕಡೆಯವರ ನಡುವೆ ಮಾತಿಗೆ ಮಾತು ಬೆಳೆದು ಪರಸ್ಪರ ಹೊಡೆದಾಡಿ ಕೊಂಡಿದ್ದಾರೆ. ಪರಸ್ಪರ ಹಲ್ಲೆ ನಡೆದಿರುವ ಸಂಬಂಧ ಎರಡೂ ಕಡೆಯವರು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಗಾಯಾಳು ಲೋಕೇಶ್ ಅವರನ್ನು ಜಿಲ್ಲಾ ಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದರೆ, ವೃದ್ಧ ದಂಪತಿಯನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಲಾಗಿದೆ.

ಹಕ್ಕುಪತ್ರ ಇದ್ದರೂ ಖಾತೆ ಮಾಡಿಕೊಡಲು ಹಿಂದೇಟು: ಆಕ್ರೋಶ

• ಪ್ರಜೋದಯ ವರದಿ

ಹಾಸನ: ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಗ್ರಾಮದಲ್ಲಿ 47 ಕುಟುಂಬಸ್ಥರಿಗೆ ಹಕ್ಕುಪತ್ರ ನೀಡಿದ್ದರೂ ರಾಜಕೀಯ ಕಾರಣದಿಂದ ಖಾತೆ ಮಾಡಿಕೊಡಲು ಹಿಂದೇಟು ಹಾಕುತ್ತಿ ದ್ದಾರೆಂದು ರೈತ ಸಂಘದ ಮುಖಂಡ ಯೋಗಣ್ಣ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಎ.ಟಿ. ರಾಮಸ್ವಾಮಿ ಅವರು ಕ್ಷೇತ್ರ ಶಾಸಕರಾಗಿದ್ದಾಗ ನಿವೇಶನ ರಹಿತರಿಗೆ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆಯಡಿ ಬಡವರಿಗೆ ಹಕ್ಕುಪತ್ರ ನೀಡಲಾಗಿದೆ. ಆದರೆ ಪ್ರಸ್ತುತ ಶಾಸಕರಾಗಿರುವ ಎ. ಮಂಜು ಅವರು ಈಗ ಇ-ಸ್ವತ್ತು, ಖಾತೆ ಮಾಡಿಕೊಟ್ಟರೆ ಅದರ ಕೊಡುಗೆ ಎ.ಟಿ.ರಾಮಸ್ವಾಮಿ ಅವರಿಗೆ ಸಲ್ಲುತ್ತದೆಂದು ಅಧಿಕಾರಿಗಳ ಮೂಲಕ ಕಾರ್ಯಕ್ಕೆ ಅಡ್ಡಿಯಾಗುತ್ತಿದ್ದಾರೆಂದು ಆರೋಪಿಸಿದರು.

ರಾಮನಾಥಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋಟವಾಳುವಿನ ಸರ್ವೆ ನಂ.12ರಲ್ಲಿ 47 ಜನರಿಗೆ 30★40ರಂತೆ ಜಾಗ ಗುರುತಿಸಿ ಹಕ್ಕುಪತ್ರ ನೀಡಲಾಗಿದೆ. ಆದರೆ ನಿವೇಶನದಲ್ಲಿ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಖಾತೆ ಮಾಡಿಕೊಡಿ ಎಂದು ಆಗ್ರಹಿಸಿ ಎಷ್ಟೇ ಬಾರಿ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. 2022ರ ಅ.10ರಂದು ಸರ್ಕಾರದ ಮುಖ್ಯ ಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರು, ಅಧಿಕಾರಿಗಳ ಸಮ್ಮುಖದಲ್ಲೇ ವಿತರಣೆ ಮಾಡಿದ ಹಕ್ಕುಪತ್ರಕ್ಕೆ ಬೆಲೆ ಇಲ್ಲದಂತೆ ಮಾಡಿದ್ದಾರೆಂದರು.

ವಿಳಂಬ ನೀತಿ ಖಂಡಿಸಿ ತಾಲ್ಲೂಕು ಪಂಚಾಯಿತಿ ಕಚೇರಿ ಎದುರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದ್ದರ ಪರಿಣಾಮ ಅಧಿಕಾರಿಗಳು ಕೆಲವು ದಾಖಲಾತಿಗಳನ್ನು ಸಲ್ಲಿಸಲು ಹೇಳಿದ್ದರು. ಅವರು ಹೇಳಿದ ಎಲ್ಲಾ ಕಾಗದ ಪತ್ರಗಳನ್ನು ಸಲ್ಲಿಸಲು ಫಲಾನುಭವಿಗಳು ಸಿದ್ದರಿದ್ದಾರೆ. ಮೂರು ತಲೆಮಾರಿನ ವಂಶವೃಕ್ಷ ನೀಡುವಂತೆ ಕೇಳಿದ್ದಾರೆ. ಹಕ್ಕುಪತ್ರ ಅನ್ವಯ ಖಾತೆ ಮಾಡಿಕೊಡಲು ವಂಶವೃಕ್ಷ ಬೇಕಿಲ್ಲವಾದರೂ ಅಧಿಕಾರಿಗಳು ಅನಗತ್ಯ ಕಾನೂನು ರೂಪಿಸುತ್ತಿದ್ದಾರೆ. ಕುಟುಂಬದ ಹಿರಿಯರು ನಿಧನರಾಗಿ ವರ್ಷಗಳೇ ಕಳೆದಿವೆ. ಈಗ ವಂಶವೃಕ್ಷ ದಾಖಲಾತಿಗಳನ್ನು ಎಲ್ಲಿಂದ ತರುವುದೆಂದು ಪ್ರಶ್ನಿಸಿದರು.

ನ್ಯಾಯಕ್ಕಾಗಿ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದರೆ ಅದಕ್ಕೂ ಅಡ್ಡಗಾಲು ಹಾಕಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಧರಣಿ ಮಾಡಲು ಸೂಚಿಸಿದ್ದಾರೆ. ಹೀಗಾದರೆ ಬಡವರ ಧ್ವನಿ ಯಾರಿಗೆ ಕೇಳುತ್ತದೆಂದು ಪ್ರಶ್ನಿಸಿದರು. ರೈತ ಸಂಘದ ರವಿ, ಫಲಾನುಭವಿಗಳಾದ ವಸಂತಕುಮಾರಿ, ಸುಜಾತಾ, ಮಂಜುಳಾ, ಮಧು ಹಾಜರಿದ್ದರು.

6 ತಿಂಗಳ ಬಳಿಕ ಭಾಗಶಃ ಕಾಡಾನೆಗಳ ಸ್ಥಳಾಂತರ

» ಮೊದಲನೇ ಪುಟದಿಂದ

ಗಳ ಚಲನವಲನವನ್ನು ನಿಖರವಾಗಿ ಊಹಿಸುವುದು ಕಷ್ಟವೆಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳಾಂತರಕ್ಕೆ ಹಲವು ಅಡೆತಡೆಗಳಿದ್ದರೂ ಪರ್ಯಾಯ ಮಾರ್ಗವಾಗಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಆರಂಭವಾದ ಮೇಲೆ ಆನೆಗಳ ವಲಸೆ ಮಾರ್ಗಕ್ಕೆ ತಡೆ ಆಗಿದೆ. ನಡುವೆ ಎತ್ತಿನ ಹೊಳೆ ಚೆಕ್ ಡ್ಯಾಂ ಬಂದಿದೆ. ಅಂತಹ ಕಡೆಗಳಲ್ಲಿ ಕಾಡಾನೆಗಳ ಸಂಚಾರಕ್ಕೆ ತೊಂದರೆಯಾಗಿದೆ. ಬಿ.ಎಂ.ರಸ್ತೆ ಬಂದ ಮೇಲೆ ಓಡಾಟಕ್ಕೆ ತೊಂದರೆ ಆಗಿ ಕಾಡಾನೆಗಳು ಗ್ರಾಮಗಳಿಗೆ ಬರುತ್ತಿವೆ. ಹತ್ತಾರು ವರ್ಷಗಳ ವಲಸೆ ಮಾರ್ಗ ಬಂದ್ ಇತ್ತು. ಆ ರಸ್ತೆ ಇಲ್ಲದ ಕಾರಣ ಗಜಪಡೆ ಹೊಸ ರಸ್ತೆಗಳಲ್ಲಿ ಓಡಾಡುತ್ತಿವೆ. ರೈತರು ಬೆಳೆದ ಬೆಳೆಗಳನ್ನು ನಾಶಪಡಿಸುತ್ತಿವೆ. ವಿಶೇಷವಾಗಿ ಅಡಿಕೆ ಮತ್ತು ಕಾಫಿ ಬೆಳೆಗಳಿಗೆ ಹಾನಿಯಾದರೆ ಪುನಃ ಬೆಳೆಸಲು ವರ್ಷಗಳ ಕಾಲ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹೆಚ್ಚಿನ ಸಮಸ್ಯೆಯಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಹಾರ ಕ್ರಮ ಕೈಗೊಳ್ಳಲಾಗುವುದು ಎಂದರು.

ಬಿಜೆಪಿಯಿಂದ ಜನಾಕ್ರೋಶ ಸಭೆ: ಪ್ರತಿಭಟನೆ

• ಪ್ರಜೋದಯ ವರದಿ

ಸಕಲೇಶಪುರ: ಮಹಿಳಾ ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟದ ನಿಲುವಿಗೆ ಮುಂದಿನ ದಿನಗಳಲ್ಲಿ ದೇಶದ ಮಹಿಳೆಯರು ತಕ್ಕ ಉತ್ತರ ನೀಡಲಿದ್ದಾರೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ತಾಲ್ಲೂಕು ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಆಯೋಜಿಸಿದ್ದ ಜನಾಕ್ರೋಶ ಸಭೆಯಲ್ಲಿ ಮಾತನಾಡಿದ ಅವರು, ಮಹಿಳೆಯರಿಗೆ ರಾಜಕೀಯ ದಲ್ಲಿ ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶದಿಂದ ತರಲಾಗಿರುವ ಮಹಿಳಾ ಮೀಸಲಾತಿ ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸುವುದು ದುರದೃಷ್ಟಕರ ಬೆಳವಣಿಗೆ. ಮಹಿಳಾ ಸಬಲೀಕರಣಕ್ಕೆ ಇದು ಮಹತ್ವದ ಹೆಜ್ಜೆಯಾಗಿದ್ದು, ಅದನ್ನು ವಿರೋಧಿಸುವುದು ಮಹಿಳೆಯರ ಹಕ್ಕುಗಳಿಗೆ ಧಕ್ಕೆ ತರುವಂತಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುವುದು ಕೇವಲ ತೋರಿಕೆಗಾಗಿ ಎಂಬುದು ನಾರಿ ಶಕ್ತಿ ವಂದನ್ ಅಧಿನಿಯಮದ ವಿರುದ್ಧ ಅವರು ತೋರಿದ ನಿಲುವಿನಿಂದ ಸಾಬೀತಾಗಿದೆ. ದಶಕಗಳ ಕಾಲ ಮಹಿಳೆಯರನ್ನು ಕೇವಲ ಮತ ಬ್ಯಾಂಕ್ ಆಗಿ ಬಳಸಿಕೊಂಡ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು, ಇಂದು ಮಹಿಳೆಯರಿಗೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಶೇ.33ರಷ್ಟು ರಾಜಕೀಯ ಮೀಸಲಾತಿ ನೀಡುವ ಐತಿಹಾಸಿಕ ಮಸೂದೆಯನ್ನು ಬೆಂಬಲಿಸುವ ಬದಲು ಅದರ ವಿರುದ್ಧ ನಿಂತಿರುವುದು ಖಂಡನೀಯ ಎಂದು ಹೇಳಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ ಅವರು ಮಾತನಾಡಿ, ಮಹಿಳೆಯರಿಗೆ ನಿಜವಾದ ಅಧಿಕಾರ ಸಿಗುವುದನ್ನು ಸಹಿಸದ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ ಈ ಧೋರಣೆಯು ಅವರ ಸಂಕುಚಿತ ಮನಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಹಿಂದೆ ಇದೇ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಮಹಿಳಾ ಮೀಸಲಾತಿಯನ್ನು ಜಾರಿಗೆ ತರದೆ ಕಾಲಹರಣ ಮಾಡಿತ್ತು. ಈಗ ಅದನ್ನು ಜಾರಿಗೆ ತರಲು ಮುಂದಾದಾಗ ಕ್ಷುಲ್ಲಕ ಕಾರಣಗಳನ್ನು ನೀಡಿ ವಿರೋಧಿಸುತ್ತಿದೆ ಎಂದರು.

ಬಿಜೆಪಿ ಜಿಲ್ಲಾ ಮುಖಂಡರಾದ ನೇತ್ರ ಸುರೇಶ್ ಅವರು ಮಾತನಾಡಿ, ಸ್ತ್ರೀ ಶಕ್ತಿಯ ಗೌರವಕ್ಕಾಗಿ ತಂದ ಈ ಅಧಿನಿಯಮಕ್ಕೆ ಅಡ್ಡಿಪಡಿಸಿದ ಕಾಂಗ್ರೆಸ್ ಮತ್ತು ವಿಪಕ್ಷಗಳ ಈ ನಡೆ ಕೋಟ್ಯಾಂತರ ಮಹಿಳೆಯರ ಕನಸಿಗೆ ಮಾಡಿದ ದ್ರೋಹವಾಗಿದೆ. ನಾರಿ ಶಕ್ತಿಯ ಪ್ರಗತಿಗೆ ಕಂಟಕವಾಗಿರುವ ಇಂತಹ ಮಹಿಳಾ ವಿರೋಧಿ ರಾಜಕಾರಣಕ್ಕೆ ದೇಶದ ಮಹಿಳೆಯರು ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸುವುದು ಖಚಿತ ಎಂದರು.

ಬಿಜೆಪಿ ಮಂಡಲ ಮಾಜಿ ಅಧ್ಯಕ್ಷ ಟಿ.ರಾಜಕುಮಾರ್ ಅವರು ಮಾತನಾಡಿ, ಮಹಿಳೆಯರಿಗೆ ಆಸ್ತಿ ಹಕ್ಕು, ಶಿಕ್ಷಣ, ರಾಜಕೀಯ ಭಾಗವಹಿಸುವಿಕೆ ಸೇರಿ ಎಲ್ಲಾ ಕ್ಷೇತ್ರಗಳಲ್ಲಿ ಸಮಾನ ಅವಕಾಶ ದೊರಕಬೇಕು. ಮಹಿಳೆಯರು ವಿಧಾನಸಭೆ, ಸಂಸತ್ ಸೇರಿ ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಹೇಳಿದರು.

ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ, ಬಬಿತ ವಿಶ್ವನಾಥ್, ಸುಷ್ಮಾ, ಕೃಷ್ಣಮೂರ್ತಿ ಅಬ್ಬನ, ಆಗನಿ ಸೋಮಶೇಖರ್, ಶಾಸಕ ಸಿಮೆಂಟ್ ಮಂಜು ಅವರ ಪತ್ನಿ ಪ್ರತಿಭಾ, ಪುರಸಭಾ ಮಾಜಿ ಸದಸ್ಯರಾದ ವನಜಾಕ್ಷಿ, ರೇಖಾ ರುದ್ರಕುಮಾರ್, ಮುಖಂಡರಾದ ಎಸ್.ಎಲ್.ಲೋಕೇಶ್, ಮನು ಕುಮಾರ್, ಪ್ರಗತಿ, ಗಾಯತ್ರಿ, ಮೇಘ, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಜನಪದ ಪೂರ್ವಜರು ನೀಡಿರುವ ಬಹುದೊಡ್ಡ ಕಾಣಿಕೆ

• ಪ್ರಜೋದಯ ವರದಿ

ಹಾಸನ: ಜನಪದ ಕಲೆಯು ಪೂರ್ವಜರು ನಮಗೆ ನೀಡಿರುವ ಬಹುದೊಡ್ಡ ಕೊಡುಗೆ.ಅದನ್ನು ಮುಂದಿನ ಪೀಳಿಗೆಗೆ ತಲುಪಿಸುವ ಗುರುತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ರಂಗಕರ್ಮಿ ಮತ್ತು ದೊಡ್ಡಬೀಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗರಾಜ ಅವರು ಹೇಳಿದರು.

ತಾಲ್ಲೂಕಿನ ದೊಡ್ಡಬೀಕನಹಳ್ಳಿ ಆಂಜನೇಯ ಸ್ವಾಮಿ ದೇವಾಲಯ ಆವರಣದಲ್ಲಿ ಜಾಗರವಳ್ಳಿ ವಾಲ್ಮೀಕಿ ಮಹಿಳಾ ಸಾಂಸ್ಕೃತಿಕ ಕಲಾ ಸಂಸ್ಥೆ, ಕರ್ನಾಟಕ ಜನಪದ ಪರಿಷತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಜನಪದ ಸಂಭ್ರಮ ಮತ್ತು ವಿಚಾರ ಸಂಕಿರಣ ಕಾರ್ಯಕ್ರಮವನ್ನು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಜನಪದದಲ್ಲಿ ಹೆಣ್ಣಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಎಲ್ಲದಕ್ಕೂ ಹೆಣ್ಣೇ ಮೊದಲು ಎಂಬುದನ್ನು ನಮ್ಮ ಪುರಾಣದಲ್ಲಿ ಕಾಣಬಹುದು. ಹಾಗೆ ಇಂತಹ ಪ್ರಮುಖ ಕಲೆಗಳಾದ ಕೋಲಾಟ, ಸೋಬಾನೆ ಪದ, ಬೀಸೋ ಕಲ್ಲಿನ ಪದ, ಸುಗ್ಗಿ ಕುಣಿತ, ಸೋಮನ ಕುಣಿತ, ಪೂಜಾ ಕುಣಿತ, ಡೊಳ್ಳು ಕುಣಿತ, ಭಜನೆ ಗೀಗಿ ಪದ, ವೀರಗಾಸೆ ಪರಂಪರೆಯನ್ನು ಉಳಿಸಿ ಬೆಳೆಸುವ ಕೆಲಸ ಆಗಬೇಕಿದೆ ಎಂದರು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಸಣ್ಣಚಾರಿ ಅವರು ಮಾತನಾಡಿ, ಯುವ ಪೀಳಿಗೆಗೆ ಪರಿಚಯವೇ ಇಲ್ಲದ ಅನೇಕ ಕಲೆಗಳು ಹಾಗು ಕಲಾವಿದರನ್ನು ಗುರುತಿಸಿ ವೇದಿಕೆ ನೀಡುವುದರ ಜೊತೆಗೆ ಅವರಿಗೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುವ ಕೆಲಸ ಆಗಬೇಕು. ಆಧುನಿಕತೆಯ ಹೆಸರಲ್ಲಿ ಪಾಶ್ಚಿಮಾತ್ಯ ಪರಂಪರೆಯನ್ನು ಅನುಸರಿಸುತ್ತ ಬಂದಿರುವ ನಾವು ಸಂಸ್ಕೃತಿ-ಪರಂಪರೆಯನ್ನು ರಕ್ಷಿಸಲು ಸಾಧ್ಯತೆ ನೀಡಬೇಕೆಂದರು.

ನಿವೃತ್ತ ಶಿಕ್ಷಕ ಶಿವಣ್ಣ ಅವರು ಮಾತನಾಡಿ, ಜನಸಾಮಾನ್ಯರು ತಮ್ಮ ಮನದ ನೋವು- ನಲಿವುಗಳನ್ನು ವ್ಯಕ್ತಪಡಿಸಲು ಕಂಡುಕೊಂಡ ದಾರಿಯೇ ಜನಪದ. ಉತ್ತರ ಕರ್ನಾಟಕದಲ್ಲಿ ಜನಪದ ಉತ್ತುಂಗದಲ್ಲಿದೆ. ದೇವರ ಚರಿತ್ರೆಗಳು ಜನಪದವನ್ನೇ ಅವಲಂಬಿಸಿದೆ ಎಂದರು.

ಸರ್ಕಾರ ಒಂಬತ್ತನೇ ತರಗತಿಯಲ್ಲಿ ಜನಪದ ಕುರಿತು ಪಠ್ಯ ನೀಡಿ ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ಮಾಡಿರುವುದು ಸ್ವಾಗತರ್ಹ ಎಂದರು. ಪೂಜಾ ಕುಣಿತ, ಡೊಳ್ಳು ಕುಣಿತ, ಕೋಲಾಟ, ಸೋಮನ ಕುಣಿತ, ಕಂಸಾಳೆಯನ್ನು ವೇದಿಕೆಯಲ್ಲಿ ಪ್ರದರ್ಶನ ನೀಡಲಾಯಿತು.

ಕೊಕ್ಕನಘಟ್ಟದಲ್ಲಿ ಅಂಬೇಡ್ಕರ್ ಬ್ಯಾನರ್ ಹರಿದ ಕಿಡಿಗೇಡಿಗಳು

• ಪ್ರಜೋದಯ ವರದಿ

ಹಾಸನ: ಡಾ.ಬಿ.ಆರ್.ಅಂಬೇಡ್ಕರ್ ಅವರ ಬ್ಯಾನರ್ ಹರಿದು ಹಾಕಿರುವ ಘಟನೆ ಹನುಮಂತಪುರ ರಸ್ತೆಯ ಕೊಕ್ಕನಘಟ್ಟ ಗ್ರಾಮದಲ್ಲಿ ನಡೆದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕೆಂದು ದಲಿತ ಮುಖಂಡರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ಜಾತಿ ನಿಂದನೆ ಸಮಿತಿ ಸದಸ್ಯೆ ಶಿವಮ್ಮ ಅವರು ಮಾತನಾಡಿ, ಕೊಕ್ಕನಘಟ್ಟ ಗ್ರಾಮದಲ್ಲಿ ಡಾ. ಬಿ. ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಹಾಕಿದ್ದ ಬ್ಯಾನರ್ ಅನ್ನು ಭಾನುವಾರ ರಾತ್ರಿ ಕಿಡಿಗೇಡಿಗಳು ಹರಿದು ವಿರೂಪಗೊಳಿಸಿದ್ದಾರೆಂದು ಆರೋಪಿಸಿದರು.

ಅಂಬೇಡ್ಕರ್ ಅವರು ಸರ್ವ ಜನಾಂಗಕ್ಕೂ ಸಮಾನ ಅವಕಾಶ ನೀಡಿ ಸಮಾಜದಲ್ಲಿ ಎಲ್ಲರೂ ಗೌರವಯುತವಾಗಿ ಬದುಕುವಂತೆ ಸಂವಿಧಾನ ರೂಪಿಸಿದ್ದಾರೆ. ಕೆಲ ಕಿಡಿಗೇಡಿಗಳು ಇಂದಿಗೂ ಅವರನ್ನು ದ್ವೇಷಿಸುವ, ಅಪಮಾನ ಮಾಡುವ ಕೆಲಸ ಮಾಡುತ್ತಿದ್ದು, ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸಬೇಕೆಂದು ಒತ್ತಾಯಿಸಿದರು.

ಕೊಕ್ಕನಘಟ್ಟ ಗ್ರಾಮದಲ್ಲಿ ನಡೆದಿರುವ ಅಹಿತಕರ ಘಟನೆ ಇದೇ ಮೊದಲಲ್ಲ. 3 ವರ್ಷಗಳಿಂದ ಇದೇ ರೀತಿಯ ದುಷ್ಕೃತ್ಯ ಎಸಗಲಾಗುತ್ತಿದೆ. ಪೊಲೀಸರು ಶೀಘ್ರ ಕ್ರಮ ಜರುಗಿಸದಿದ್ದರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ಗ್ರಾಮದಲ್ಲಿ ಅಶಾಂತಿ ವಾತಾವರಣ ಸೃಷ್ಟಿಯಾಗಬಾರದೆಂಬ ದೃಷ್ಟಿಯಿಂದ ಕಳೆದ 2 ವರ್ಷಗಳಿಂದ ಸಂಧಾನ ಮಾತುಕತೆ ಮಾಡಿ ಶಾಂತಿ ಕಾಪಾಡಿಕೊಂಡು ಬಂದಿದ್ದೇವೆ. ಈ ಬಾರಿ ಅಲ್ಲಿನ ಸಿಸಿಟಿವಿ ವಿಡಿಯೋ ಆಧರಿಸಿ ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಗ್ರಾಮಸ್ಥರಾದ ಕುಮಾರಿ, ಸ್ವಾಮಿ, ಅರುಣ್, ಸಾಗರ್, ಗಿರೀಶ್, ರವಿ, ಪ್ರಮೋದ್, ಸ್ವಾಮಿ, ದೇವರಾಜ್, ಭರತ್, ಗೌತಮ್, ಸಚಿನ್, ಕಿರಣ್, ಶ್ರೀನಿವಾಸ್, ಸಾಗರ್, ಪಾಪಣ್ಣ, ಸುನೀಲ್ ಆನಂದ್ ಇದ್ದರು.

ಇಂದು ತೆಂಕಲಗೂಡು ಮಠದಲ್ಲಿ ಪೂಜಾ ಕಾರ್ಯ

ಸಕಲೇಶಪುರ: ತಾಲ್ಲೂಕಿನ ಯಸಳೂರು ಗ್ರಾಮದಲ್ಲಿರುವ ತೆಂಕಲ ಗೂಡು ಬೃಹನ್ಮಠದಲ್ಲಿ ಏ.29ರಂದು ಲಿಂಗೈಕ್ಯ ಷ.ಬ್ರ.ಚನ್ನ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಅವರ 6ನೇ ವರ್ಷದ ಪುಣ್ಯ ಸ್ಮರಣೆ, ಚನ್ನಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ 6ನೇ ವರ್ಷದ ಗುರು ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಮಹೋತ್ಸವದ ಅಂಗವಾಗಿ ಇಷ್ಟಲಿಂಗ ಮಹಾಪೂಜೆ, ವೀರಶೈವ ಪಂಚಸೂತ್ರೀಯ ಪ್ರವಚನ, ವೀರಶೈವ ಪದದರ್ಶನ ಹಾಗೂ ಸಿದ್ಧಾಂತ ಶಿಖಾಮಣಿ ಪ್ರಭೇ ಗ್ರಂಥಗಳ ಲೋಕಾರ್ಪಣೆ, ಶಿವ ದೀಕ್ಷಾ ಕಾರ್ಯಕ್ರಮ, ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಪಂಚಪೀಠಗಳಲ್ಲಿ ಒಂದಾದ ಶ್ರೀಮದ್ ಕಾಶಿ ಜ್ಞಾನ ಸಿಂಹಾಸನದೀಶ್ವರ ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಅವರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಇಷ್ಟಲಿಂಗ ಮಹಾಪೂಜೆ ನಂತರ ಮಹಾಸನ್ನಿಧಿ ಅವರ ಸಾನಿಧ್ಯದಲ್ಲಿ ಸಿದ್ಧಾಂತ ಶಿಖಾಮಣಿ ಪ್ರವಚನ ನಡೆಯಲಿದೆ.

ಇರಾನ್ ಪ್ರಸ್ತಾವನೆಗೆ ಟ್ರಂಪ್ ಅಸಮಾಧಾನ

• ಪ್ರಜೋದಯ ವರದಿ

ವಾಷಿಂಗ್ಟನ್: ಅಮೇರಿಕಾ ಮತ್ತು ಇರಾನ್ ನಡುವಿನ ಸಂಘರ್ಷವನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ ಇರಾನ್ ನೀಡಿರುವ ಇತ್ತೀಚಿನ ಪ್ರಸ್ತಾವನೆಯ ಬಗ್ಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಸಮಾಧಾನ ಹೊಂದಿದ್ದಾರೆಂದು ಅಮೇರಿಕಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಫೆ.28ರಂದು ಇರಾನ್ ಮೇಲೆ ಅಮೇರಿಕಾ ಹಾಗು ಇಸ್ರೇಲ್ ಜಂಟಿ ದಾಳಿ ನಡೆಸಿದ್ದವು. ಇದು ಪಶ್ಚಿಮ ಏಷ್ಯಾ ಸಂಘರ್ಷಕ್ಕೆ ಕಾರಣವಾಗಿತ್ತು. ಇದು ಜಾಗತಿಕ ಇಂಧನ ಪೂರೈಕೆಯಲ್ಲಿ ವ್ಯತ್ಯಯ, ಹಣದುಬ್ಬರ ಹಾಗು ಸಾವಿರಾರು ಜನರ ಸಾವಿಗೆ ಕಾರಣವಾಗಿದೆ. ಟ್ರಂಪ್ ಅಸಮಾ ಧಾನವು ಶಾಶ್ವತ ಕದನ ವಿರಾಮದ ಬೆಳವಣಿಗೆಗೆ ಹಿನ್ನಡೆ ಉಂಟುಮಾಡಿದೆ.

ಪಶ್ಚಿಮ ಏಷ್ಯಾ ಸಂಘರ್ಷ ಮತ್ತು ಹೊರ್ಮುಜ್ ಜಲಸಂಧಿ ವಿವಾದವು ಇತ್ಯರ್ಥವಾ ಗುವವರೆಗೆ ಪರಮಾಣು ಕಾರ್ಯಕ್ರಮದ ಕುರಿತಾದ ಚರ್ಚೆಯನ್ನು ಬದಿಗಿರಿಸಬೇಕೆಂದು ಇರಾನ್, ಇತ್ತೀಚಿನ ಪ್ರಸ್ತಾವನೆಯಲ್ಲಿ ತಿಳಿಸಿತ್ತು. ಆದರೆ, ಇರಾನ್‌ನ ಪರಮಾಣು ವಿಷಯವೇ ಮೊದಲ ಆದ್ಯತೆ ಎಂದಿರುವ ಟ್ರಂಪ್, ಇರಾನ್‌ನ ಪ್ರಸ್ತಾವನೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿ ಸಿದ್ದಾರೆಂದು ಶ್ವೇತಭವನದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊದಲ ಹಂತವಾಗಿ ಅಮೇರಿಕಾ-ಇಸ್ರೇಲ್ ಯುದ್ಧವನ್ನು ನಿಲ್ಲಿಸಬೇಕು ಮತ್ತು ಅದನ್ನು ಮತ್ತೆ ಪ್ರಾರಂಭಿಸಲು ಸಾಧ್ಯವಿಲ್ಲ ಎಂಬ ಖಾತರಿ ನೀಡಬೇಕು. ನಂತರ, ಸಮುದ್ರ ವ್ಯಾಪಾರದ ಮೇಲೆ ಅಮೇರಿಕಾ ನೌಕಾಪಡೆ ವಿಧಿಸಿರುವ ದಿಗ್ಬಂಧನ ಮತ್ತು ಹೊರ್ಮುಜ್ ಜಲಸಂಧಿಯ ಭವಿಷ್ಯದ ಬಗ್ಗೆ ನಿರ್ಧಾರವಾಗಬೇಕು. ಆ ನಂತರ ಪರಮಾಣು ಕಾರ್ಯಕ್ರಮದ ಕುರಿತು ಮಾತುಕತೆಗಳು ನಡೆಯಲು ಸಾಧ್ಯವೆಂದು ಇರಾನ್ ಹೊಸ ಪ್ರಸ್ತಾವನೆಯಲ್ಲಿ ತಿಳಿಸಿತ್ತು.

ನೂತನ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿಗೆ ಅಧಿಕಾರ ಹಸ್ತಾಂತರ

ಕಾಲೇಜು ಹಂತದಲ್ಲಿ ನೂತನ ರೋಟ್ರ್ಯಾಕ್ಟ್ ಕ್ಲಬ್ ಆರಂಭ

• ಪ್ರಜೋದಯ ವರದಿ

ಹಾಸನ: ಸಮಾಜ ಸೇವೆಗೆ ಯುವ ಪೀಳಿಗೆಯನ್ನು ತೊಡಗಿಸಿಕೊಳ್ಳುವಂತೆ ಮಾಡಲು ರೋಟರಿ ಸಂಸ್ಥೆ ವತಿಯಿಂದ ಕಾಲೇಜು ಹಂತದಲ್ಲಿ ರೋಟ್ರ್ಯಾಕ್ಟ್ ಕ್ಲಬ್‌ಗಳನ್ನು ಆರಂಭಿಸಲಾಗುತ್ತಿದ್ದು, ಆ ಮೂಲಕ ಯುವ ನಾಯಕರನ್ನು ಸಮಾಜಕ್ಕೆ ನೀಡು ಕಾರ್ಯ ರೋಟರಿ ಸಂಸ್ಥೆ ವತಿಯಿಂದ ಮಾಡಲಾಗುತ್ತಿದೆಂದು ರೋಟರಿ 3182 ಜಿಲ್ಲಾ ಗವರ್ನರ್ ಕೆ.ಪಾಲಾಕ್ಷ ಅವರು ಹೇಳಿದರು.

ನಗರದ ಎಂ.ಜಿ.ರಸ್ತೆಯಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಹಾಗೂ ಕಾಲೇಜಿನ ಐ.ಕ್ಯೂ.ಎ.ಸಿ. ಘಟಕದ ವತಿಯಿಂದ ನಡೆದ ರೋಟ್ರ್ಯಾಕ್ಟ್ ಕ್ಲಬ್‌ನ ನೂತನ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಮತ್ತು ಸದಸ್ಯರ ಪದಗ್ರಹಣ ಕಾರ್ಯಕ್ರಮದಲ್ಲಿ ನೂತನ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರಿಸಿ ಮಾತನಾಡಿದ ಅವರು, ಶಾಲಾ-ಕಾಲೇಜು ಹಂತದಲ್ಲಿ ಮಕ್ಕಳನ್ನು ಸಾಮಾಜಿಕಸೇವೆಯಲ್ಲಿ ತೊಡಗುವಂತೆ ಮಾಡಲು ರೋಟ್ರ್ಯಾಕ್ಟ್ ಕ್ಲಬ್‌ಗಳನ್ನು ಆರಂಭಿಸಲಾಗಿದ್ದು, ಪದವಿ ಹಂತದಲ್ಲಿ ಯುವಕರು ತಮ್ಮ ಪಠ್ಯದೊಂದಿಗೆ ರೋಟರಿಯಲ್ಲಿ ಕಾರ್ಯನಿರ್ವಹಿಸಿದರೆ ಜೀವನದಲ್ಲಿ ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದರು.

ಕಾಲೇಜಿನ ವಿದ್ಯಾಭ್ಯಾಸದ ಅವಧಿಯಲ್ಲಿ ಸಾಮಾಜಿಕ ಸೇವೆ, ಹೊಣೆಗಾರಿಕೆ, ಮಾತುಗಾರಿಕೆ ಸೇರಿ ಜವಾಬ್ದಾರಿಯುತ ಹುದ್ದೆಗಳ ನಿರ್ವಹಣೆಯ ಬಗ್ಗೆ ತಿಳಿಯಲು ಸಹಕಾರಿಯಾಗಲಿದೆ. ರೋಟರಿ ಸಂಸ್ಥೆ ಇಂದು ವಿಶ್ವದ 220 ರಾಷ್ಟ್ರಗಳಲ್ಲಿ ಕಾರ್ಯನಿರ್ವಹಣೆ ಮಾಡುತ್ತಿದ್ದು, 12.5 ಲಕ್ಷ ರೋಟರಿ ಸದಸ್ಯರು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಶಾಲಾ ಹಂತದಲ್ಲಿ 3.5 ಲಕ್ಷ ಮಕ್ಕಳು ರೋಟರಿ ಸೇವೆಯಲ್ಲಿ ಇದ್ದು, ಕಾಲೇಜು ಹಂತದಲ್ಲಿ 2 ಲಕ್ಷ ಮಂದಿ ಮಕ್ಕಳು ರೋಟರಿ ಸಂಸ್ಥೆಗೆ ನೋಂದಣಿ ಮಾಡಿಕೊಂಡು ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡಿದ್ದಾರೆ. ಒಟ್ಟು ವಿಶ್ವದಲ್ಲಿ 21 ಲಕ್ಷ ಮಂದಿ ರೋಟರಿ ಸ್ವಯಂ ಸೇವಕರು ಸಮಾಜದ ಸೇವೆ ಗಾಗಿ ದುಡಿಯುತ್ತಿದ್ದಾರೆ ಎಂದರು.

ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಅಧ್ಯಕ್ಷ ಬಿ.ಕೆ.ಗಂಗಾಧರ್ ಅವರು ಮಾತನಾಡಿ, ಕಾಲೇಜು ಹಂತದಲ್ಲಿ ಮಕ್ಕಳಿಗೆ ಸಮಾಜದ ಬಗೆಗೆ ತಿಳಿಸಿಕೊಡುವ ಉದ್ದೇಶದಿಂದ ರೋಟರಿ ಕಾಲೇಜು ಹಂತದಲ್ಲಿ ಈ ರೋಟ್ರ್ಯಾಕ್ಟ್ ಆರಂಭಿಸಿದೆ. ರೋಟರಿ ನಡೆಸಿಕೊಂಡು ಬಂದಿರುವ ಸಾಮಾಜಿಕ ಕೆಲಸಗಳ ಬಗ್ಗೆ ತಿಳಿಸಿಕೊಡುವುದರ ಜೊತೆಗೆ ಈ ರೋಟರಿ ಸಂಸ್ಥೆ ಸಮಾಜದಲ್ಲಿ ಹೇಗೆ ಶೋಷಿತರ ಪರವಾಗಿ ಕೆಲಸ ಮಾಡುತ್ತಿದೆ ಎಂಬುವುದರ ಬಗ್ಗೆ ತಿಳಿಸಿಕೊಡಲಿದೆ ಎಂದರು.

ಪ್ರಾಂಶುಪಾಲರಾದ ಡಾ.ಕೆ.ಜಿ.ಕವಿತಾ ಅವರು ಮಾತನಾಡಿ, ಇಂದು ಯುವ ಪೀಳಿಗೆ ಸಾಮಾಜಿಕ ಜವಾಬ್ದಾರಿಯನ್ನು ಮರೆತಿದ್ದಾರೆ ಹಾಗಾಗಿ ಅವರಿಗೆ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ತಿಳಿಸಿಕೊಡಬೇಕಾದ ಅಗತ್ಯತೆ ಇದೆ. ರೋಟರಿ ಸಂಸ್ಥೆ ಈ ವಿಚಾರವಾಗಿ ಕಾಲೇಜಿನಲ್ಲಿ ಅಂಗ ಸಂಸ್ಥೆಯನ್ನು ಆರಂಭಿಸುವ ಮೂಲಕ ಮಕ್ಕಳಲ್ಲಿ ನಾಯಕತ್ವ ಗುಣ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗುವಂತೆ ಮಾಡಲು ಮುಂದೆ ಬಂದಿರುವುದು ಶ್ಲಾಘನೀಯ. ವಿದ್ಯಾರ್ಥಿ ಗಳು ಇದನ್ನು ಸದ್ಬಳಕೆ ಮಾಡಿಕೊಂಡು ಜೀವನದಲ್ಲಿ ಉತ್ತಮ ವ್ಯಕಿಗಳಾಗಿ ಹೊರಹೊಮ್ಮ ಬೇಕೆಂದರು.

ನೂತನ ಅಧ್ಯಕ್ಷ/ಕಾರ್ಯದರ್ಶಿ/ಖಜಾಂಚಿ ಗೆ ಅಧಿಕಾರ ಹಸ್ತಾಂತರ

ರೋಟರಿ ಕ್ಲಬ್ ಆಫ್ ಹಾಸನ ರಾಯಲ್‌ನ ಅಂಗ ಸಂಸ್ಥೆಯಾದ ಮಹಿಳಾ ರೋಟ್ರ್ಯಾಕ್ಟ್ ಕ್ಲಬ್ ಆಫ್ ರಾಯಲ್‌ನ ನೂತನ ಅಧ್ಯಕ್ಷರಾಗಿ ದ್ವಿತೀಯ ಬಿ.ಎ.ವಿದ್ಯಾರ್ಥಿನಿ ಗಗನ, ಕಾರ್ಯದರ್ಶಿ ನಿವೇದಿತ ಹಾಗೂ ಪ್ರಥಮ ಬಿ.ಕಾಂ. ವಿದ್ಯಾರ್ಥಿನಿ ಮಿಸ್ಬಾ ಖಜಾಂಚಿಯಾಗಿ ಆಯ್ಕೆಯಾಗಿ ಅಧಿಕಾರ ಸ್ವೀಕಾರ ಮಾಡಿದರು.

ರೋಟರಿ ಜೋನ್ 9ರ ಸಹಾಯಕ ಗವರ್ನರ್ ಎ.ಜೆ.ಮಂಜುನಾಥ್, ಐ.ಕ್ಯೂ.ಎ.ಸಿ. ಸಂಚಾಲಕ ಎಸ್.ಯೋಗೇಶ್, ರೋಟರಿ ಕ್ಲಬ್ ಆಫ್ ಹಾಸನ ರಾಯಲ್‌ನ ಕಾರ್ಯದರ್ಶಿ ಪಿ. ರವಿ ಕುಮಾರ್, ಖಜಾಂಚಿ ಹೆಚ್.ಕೆ.ದಿಲೀಪ್ ಕುಮಾರ್, ಮಾಜಿ ಅಧ್ಯಕ್ಷ ಸಚ್ಚಿನ್ ಹಾಗೂ ಇತರರು ಹಾಜರಿದ್ದರು.

ಮೇ ಆರಂಭದಲ್ಲಿ ರಷ್ಯಾದಿಂದ ಎಸ್-400 ಕ್ಷಿಪಣಿ ವ್ಯವಸ್ಥೆಯ 4ನೇ ಘಟಕ ಭಾರತಕ್ಕೆ

ನವದೆಹಲಿ: ರಷ್ಯಾದಿಂದ ಬಹು ನಿರೀಕ್ಷಿತ ಎಸ್-400 ಟ್ರಯಂಫ್ ಕ್ಷಿಪಣಿಯ ವ್ಯವಸ್ಥೆಯ ನಾಲ್ಕನೇ ಘಟಕವು ಮೇ ಆರಂಭದಲ್ಲಿ ಭಾರತಕ್ಕೆ ತಲುಪಲಿದೆ ಎಂದು ವರದಿಯಾಗಿದೆ. ಅದರಿಂದ ಭಾರತೀಯ ವಾಯುಪಡೆಗೆ ಮತ್ತೊಂದು ಆನೆಬಲ ಬಂದಂತಾಗಿದೆ.ಕ್ಷಿಪಣಿ ವ್ಯವಸ್ಥೆಯ 4ನೇ ಘಟಕವನ್ನು ರಷ್ಯಾ ಈಗಾಗಲೇ ರವಾನಿಸಿದ್ದು, ಮುಂದಿನ ಕೆಲವೇ ದಿನಗಳಲ್ಲಿ ಭಾರತಕ್ಕೆ ಬಂದು ತಲುಪುವ ನಿರೀಕ್ಷೆಯಿದೆ. ಅದರ ಬೆನ್ನಲ್ಲೇ ಕಳೆದ ತಿಂಗಳು ಭಾರತವು ಹೆಚ್ಚುವರಿಯಾಗಿ 5 ಹೊಸ ಎಸ್-400 ಕ್ಷಿಪಣಿ ವ್ಯವಸ್ಥೆಗಳ ಖರೀದಿಗೆ ಒಪ್ಪಿಗೆ ನೀಡಿದ್ದು, ಭಾರತದ ಬಳಿ ಇರುವ ಒಟ್ಟು ಕ್ಷಿಪಣಿ ವ್ಯವಸ್ಥೆಗಳ ಸಂಖ್ಯೆ 10ಕ್ಕೆ ಏರಿಕೆಯಾಗಲಿದೆ.

ತಕ್ಷಣ ಬೇಕಾಗಿದ್ದಾರೆ
ಹಾಸನ ನಗರದ
ಪಿ.ಜಿ ಹಾಸ್ಟೆಲ್‌ಗೆ
ಅಡುಗೆ ಭಟ್ಟರು ಹಾಗೂ
ಅಡುಗೆ ಸಹಾಯಕಿಯರು
ಮತ್ತು ಸಹಾಯಕರು
ಬೇಕಾಗಿದ್ದಾರೆ
8453589228
8892104374

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019